# ಹಸಿರು ಹಾದಿ ಸಾವಯುವದಿಂದ ಜೀವವೈವಿಧ್ಯದವರೆಗೆ

## ಭೂರಹಿತನ ಕೃಷಿ ಬದುಕು!

**ಭೂರಹಿತನ ಕೃಷಿ ಬದುಕು!**

ಭೂಮಿ ಇದ್ದರಷ್ಟೇ ಕೃಷಿ ಮಾಡೋದಕ್ಕೆ ಸಾಧ್ಯ ಎನ್ನುವ ಕಾಲ ಇದು. ಆದರೆ ಫಲ್ಗುಣಿಯ ಅರಣ್ಯ ಇಲಾಖೆ ನರ್ಸರಿಯಲ್ಲಿ ಮಾಲಿಯಾಗಿರುವ ಕಂಠೇಶ್ ಹೇಳ್ತಾರೆ ಭೂಮಿ ಇಲ್ಲದೆಯೂ ಕೃಷಿಕರೆನಿಸಬಹುದು. ನೋಡಿ, ನಾನು ಮರದ ಅಡಿಯಲ್ಲಿ, ಮನೆಯ ಹಿಂಬದಿಯಲ್ಲಿ ಎರೆಗೊಬ್ಬರ ತಯಾರಿಸುತ್ತ, ತರಕಾರಿ, ಹಣ್ಣಿನ ಗಿಡಗಳನ್ನು ಬೆಳೆಸುತ್ತಾ, ವರ್ಷಕ್ಕೆ ಒಂದಿಷ್ಟು ಆದಾಯ ಪಡೆಯುತ್ತಿದ್ದೇನೆ. ಇದೂ ಕೃಷಿ ಅಲ್ಲವೇ ?

ಕಂಠೇಶ್ - ಅರಣ್ಯ ಇಲಾಖೆಯ ನರ್ಸರಿಯಲ್ಲಿ ಮಾಲಿ. ಮೂಲತಃ ಕಡೂರಿನವರು. ಪಾಲಿಗೆ ಬಂದ ಎರಡೆಕ್ರೆಯ ಹೊಲದ ಯಜಮಾನ. ಅದರ ಪಾಲನೆಯನ್ನು ಸಹೋದರರಿಗೆ ಬಿಟ್ಟುಕೊಟ್ಟು ಹೆಚ್ಚು ದುಡಿಮೆಯ ನಿರೀಕ್ಷೆಯಲ್ಲಿ ಸೇರಿಕೊಂಡುದು ಮೂಡಿಗೆರೆ ಸನಿಹದ ಫಲ್ಗುಣಿಯ ಸಚ್ಚೇನಹಳ್ಳಿ ಸರಕಾರಿ ನರ್ಸರಿಗೆ!

ಹದಿಮೂರು ವರುಷದ ಹಿಂದೆ ಇನ್ನೂರ ಎಂಭತ್ತು ರೂಪಾಯಿ ಸಂಬಳದ ದುಡಿಮೆಯೀಗ ಅಬ್ಬಬ್ಬಾ ಅಂದರೆ ಮೂರು ಸಾವಿರ ರೂಪಾಯಿಗೇರಿದೆ. ಪತ್ನಿ, ಮೂವರು ಮಕ್ಕಳು. ನರ್ಸರಿಯಲ್ಲೇ ಚಿಕ್ಕ ಗುಡಿಸಲು. ಸನಿಹ ನರ್ಸರಿಯಲ್ಲೇ ಮಾಲಿಯಾಗಿ ದುಡಿವ ಭಾವನ ಕುಟುಂಬ. ಎಲ್ಲರೂ ಸೇರಿ ಒಂಭತ್ತು ಸದಸ್ಯರು. ಒಗ್ಗಟ್ಟಿನ ಜೀವನ.

ನರ್ಸರಿಯ ಗಿಡಗಳ ಆರೈಕೆ-ರಕ್ಷಣೆ ಕಂಠೇಶರ ಮುಖ್ಯ ಕಾಯಕ. ಇಲಾಖೆ ನೀಡುವ ಮಾರ್ಗದರ್ಶನ, ಸೂಚಿಸುವ ಗೊಬ್ಬರ-ಸಿಂಪಡಣೆ-ಗಿಡಗಳನ್ನಷ್ಟೇ ಬಳಸಿ ಗಿಡ ತಯಾರಿ.

ಮೂರು ವರುಷದ ಹಿಂದೆ ಫಲ್ಗುಣಿಗೆ ಸರಕಾರದ ಸಾವಯವ ಯೋಜನೆಗಳ ಅನುಷ್ಠಾನಕ್ಕೆ ಸರಕಾರಕ್ಕೆ ಬೆನ್ನಾಗಿ ಬಂದ ಭೂಮಿ ಅಭಿವೃದ್ಧಿ ಸುಸ್ಥಿರ ಸಂಸ್ಥೆಯ ಸಂಪರ್ಕ-ಒಡನಾಟ. ಸಭೆಗಳಲ್ಲಿ ಭಾಗಿ. ಎರೆಗೊಬ್ಬರ ತಯಾರಿಯ ಮಾಹಿತಿ. ಸ್ವಂತದ್ದಾದ ಜಮೀನು-ಮನೆ ಇಲ್ಲದ ಕಾರಣ ಯಾವ ಪ್ಯಾಕೇಜ್‌ಗಳಿಗೂ ಕಂಠೇಶ್ ಅನರ್ಹರು. ಇವರ ವಿಶೇಷಾಸಕ್ತಿಗೆ ಮಾನ್ಯತೆ ನೀಡಿದ ಭೂಮಿ ಸಂಸ್ಥೆಯು ಎರೆತೊಟ್ಟಿ ನಿರ್ಮಿಸಲು ಸಹಕಾರ ನೀಡಿತು.

ಸಾವಯವ ಕೃಷಿ ಕುರಿತು ಕಂಠೇಶ್‌ರಿಗೆ ಕೇಳಿ ತಿಳಿದಿತ್ತು. ಸ್ವತಃ ಮಾಡಿ ನೋಡುವ ಕುತೂಹಲ. ತಮ್ಮ ಮನೆಯ ಮುಂದೆ ಮೂವತ್ತಾರು ವಿಶೇಷ ತಳಿಯ ಹಲಸಿನ ಮರಗಳಿವೆ. ಬಿದ್ದ ಹಲಸಿನ ಎಲೆಗಳನ್ನು ಬಳಸಿ ಎರೆಗೊಬ್ಬರ ತಯಾರಿಗೆ ನಾಂದಿ.

ಎರಡು ಹಸುಗಳು. ಅದರ ಸೆಗಣಿ, ಗಂಜಲ ಕಚ್ಚಾವಸ್ತು. ಒಂದು ಎರೆಗೊಬ್ಬರ ತೊಟ್ಟಿ. ಮತ್ತೊಂದು ಕಾಂಪೋಸ್ಟ್ ತೊಟ್ಟಿ. ತಯಾರಾದ ಗೊಬ್ಬರವನ್ನು ನರ್ಸರಿಗೆ ಬಳಸಿದರು. ಮೊದಲು ಸರಕಾರಿ ಗೊಬ್ಬರ ತಿಂದು ಬೆಳೆದದ್ದಕ್ಕಿಂತಲೂ ಸೊಂಪಾಗಿ ಗಿಡಗಳು ಮೇಲೆದ್ದುವು!

ಗಿಡಗಳ ಬೆಳವಣಿಗೆ ಗಮನಿಸಿದ ವರಿಷ್ಠರು ಇನ್ನಷ್ಟು ತಯಾರಿಸುವಂತೆ ಪ್ರೋತ್ಸಾಹ. ಕಳೆದ ವರುಷ ಒಂದು ಟನ್ ಗೊಬ್ಬರ ಮಾರಿದೆ. ತಮ್ಮ ನರ್ಸರಿಗೆ ಬಳಸಿ ಮಿಕ್ಕುಳಿದದ್ದನ್ನು ಮಾರಲು ಹಿರಿಯಧಿಕಾರಿಗಳು ಒಪ್ಪಿಗೆ ಸೂಚಿಸಿದ್ದಾರೆ ಎನ್ನುವ ಕಂಠೇಶ್, ಎರೆಗೊಬ್ಬರ

ಬಳಸಿದ್ದರಿಂದ ಗಿಡಗಳಿಗೆ ರೋಗ ಕಡಿಮೆ. ಆದರೆ ಸರಕಾರದ ನರ್ಸರಿ ಅಲ್ವಾ.. ಅವರು ಕೊಡುವ ಸಿಂಪಡಣೆ ಯನ್ನು ಒಮ್ಮೆಯಾದರೂ ಕೊಡಬೇಡ್ವಾ ಎನ್ನುವಾಗ ನಮ್ಮ ಸರಕಾರಿ ವ್ಯವಸ್ಥೆಯ ಒಂದು ಮುಖ ಬಯಲಾಗುತ್ತದೆ!

ಈ ವರುಷ ಎರಡು ಟನ್ ಗೊಬ್ಬರ ಮಾಡುವ ನಿರೀಕ್ಷೆ. ಒಂದು ಕಿಲೋ ಗೊಬ್ಬರಕ್ಕೆ ಮೂರುವರೆ ರೂಪಾಯಿಯಂತೆ ಮಾರಾಟ. ನರ್ಸರಿಗೆ ಬಳಸಿದ್ದಕ್ಕೆ ಇಲಾಖೆ ಎರಡು ರೂಪಾಯಿ ನೀಡುತ್ತದೆ. ಮನೆ, ಜಾಗ, ಅವಕಾಶ ನೀಡಿದ್ದಾರಲ್ಲಾ ದನಿಗೂಡಿಸುತ್ತಾರೆ ಕಂಠೇಶ್. ಎರೆಗೊಬ್ಬರಕ್ಕೆ ಹಲಸು ಮತ್ತು ನೇರಳೆ ಗಿಡಗಳು ಬಹುಬೇಗ ಸ್ಪಂದಿಸುತ್ತವೆ. ಎರೆಗೊಬ್ಬರವನ್ನು ಹುಡುಕಿ ಬರುವ ಅಡಿಕೆ-ಮೆಣಸು ಕೃಷಿಕರು ಇವರಿಗೆ ಗ್ರಾಹಕರು.

ಹಲಸಿನ ಒಣ ಎಲೆಯು ಬೇಗ ಕರಗುವ ಸಾಮರ್ಥ್ಯ ಹೊಂದಿದ್ದು ಎರಡೇ ತಿಂಗಳಲ್ಲಿ ಗೊಬ್ಬರ ಸಿಗುತ್ತದಂತೆ. ಸಾಮಾನ್ಯವಾಗಿ ಎರೆಗೊಬ್ಬರ ತಯಾರಾಗಲು ಮೂರುವರೆ ತಿಂಗಳು ಬೇಕೇ ಬೇಕು.

ಕಂಠೇಶ್ ಮನೆ ಸುತ್ತ ತರಕಾರಿ ಬೆಳೆದಿದ್ದಾರೆ. ಮನೆಬಳಕೆಗೆ ಮಾತ್ರ. ಸೀಮೆಬದನೆ, ಟೊಮೇಟೊ, ಮೆಣಸು.. ಹೀಗೆ. ಬೇಸಿಗೆಯಲ್ಲಿ ನೀರಿಗೆ ತತ್ವಾರ. ಸ್ವ-ಆಸಕ್ತಿಯಿಂದ ನರ್ಸರಿ ಗಿಡಗಳನ್ನೂ ಮಾಡುತ್ತಿದ್ದಾರೆ. ಎಲ್ಲಾ ಸೇರಿ ಸಂಬಳದಷ್ಟೇ ಇಲ್ಲಿನ ಉತ್ಪನ್ನಗಳು ಕೈಗೆ ಬರುತ್ತವೆ ಎನ್ನುವಾಗ ಏನೋ ಸಂತೃಪ್ತಿ.

ನರ್ಸರಿ ಗಿಡಗಳನ್ನು ತಯಾರಿಸುವ ಹೊತ್ತಿಗೆ ಕೊಟ್ಟಿಗೆ ಗೊಬ್ಬರವನ್ನು ಹೊರಗಿನಿಂದ ಖರೀದಿಸುತ್ತಾರೆ. ಇದನ್ನು ಮಣ್ಣು-ಮರಳಿನೊಂದಿಗೆ ಪ್ಲಾಸ್ಟಿಕ್ ತೊಟ್ಟೆಗೆ ಹಾಕಿ ಗಿಡ ನಾಟಿ. ಗಿಡ ಬೆಳೆಯುತ್ತಿದ್ದಂತೆ ಗೊಬ್ಬರದೊಂದಿಗೆ ಬಂದ ಕೆಲವು ಸೊಪ್ಪು ತರಕಾರಿಗಳ ಬೀಜ ಮೊಳಕೆಯೊಡೆದು ಸಸಿಯಾಗಿ ನಿತ್ಯದೂಟಕ್ಕೆ ಸುಗ್ರಾಸವಾಗುತ್ತಿದೆ! ದನಗಳ ಹೊಟ್ಟೆ ಸೇರಿದ ಬೀಜಗಳಿಗೆ ಚೆನ್ನಾಗಿ ಬೀಜೋಪಚಾರವಾಗುವುದರಿಂದ ಸೊಪ್ಪು ಚೆನ್ನಾಗಿ ಬರುತ್ತದೆ. ರುಚಿಯೂ ಕೂಡಾ ಎನ್ನುತ್ತಾರೆ ಜಯಮ್ಮ ಕಂಠೇಶ್.

ಏನಿಲ್ಲವೆಂದರೂ ಹದಿನೈದಕ್ಕೂ ಮಿಕ್ಕಿ ಸೊಪ್ಪು ತರಕಾರಿಗಳು ಸಿಕ್ಕೇ ಸಿಗ್ತವೆ. ಹರಿವೆ, ಮುಳ್ಳರಿವೆ, ಕೀರೆ, ಗೋಣಿಸೊಪ್ಪು, ಬೆರಕೆ ಸೊಪ್ಪು, ಕತ್ತಿ ಸೊಪ್ಪು, ಕೋಳಿಕಾಲು ಸೊಪ್ಪು.. ಹೀಗೆ. ಸಾರ್. ಸುತ್ತಮುತ್ತ ಇವೆಲ್ಲಾ ನೋಡೋಕೆ ಸಿಗೊಲ್ಲ. ಅಪರೂಪದ್ದು ಜತೆಗಿದ್ದ ಭೂಮಿಯ ರವಿ ಪಿಸುಗುಟ್ಟಿದರು.

ನರ್ಸರಿಯಲ್ಲಿರುವ ಮೂವತ್ತಾರು ಹಲಸಿನ ಮರಗಳು ಒಂದೊಂದರಲ್ಲಿ 150-200 ಹಣ್ಣುಗಳು ಬಿಡುತ್ತವೆ. ಅವೆಲ್ಲಾ ಬೀಜಕ್ಕಾಗಿ. ಗಿಡ ಅಭಿವೃದ್ಧಿ ಮಾಡಲು. ಒಂದು ಎಲೆಯೂ ನನ್ನ ಕಣ್ತಪ್ಪಿಸಿ ಹೋಗದು. ಒಂದೊಂದು ಎಲೆಯೂ ನನಗೆ ಪೈಸೆಗೆ ಸಮಾನ - ಕಂಠೇಶ್.

ಬೆಳೆಯುವ ಮನಸ್ಸು ಬೇಕು. ಸ್ವಂತ ಮಾಡುವ ಛಲ ಬೇಕು. ಇಲ್ಲದಿದ್ದರೆ ಮೂರು ಸಾವಿರ ಬಿಡಿ, ಹನ್ನೆರಡು ಸಾವಿರ ಸಿಕ್ಕರೂ ಜೀವನಕ್ಕೆ ಸಾಲದು ಎನ್ನುವಾಗ ಬದುಕಿನ ಅನಿವಾರ್ಯತೆ, ಸವಾಲನ್ನು ಎದುರಿಸುವ ಕಂಠೇಶರ ಛಲ ಮಿಂಚಿ ಮರೆಯಾಯಿತು.

ಸ್ವಂತದ್ದಾಗಿ ಮನೆ, ಭೂಮಿಯಿದ್ದರೂ ಕೃಷಿಯೆಂದರೆ ಅದೊಂದು ಅವಮಾನ ಅಂತ ಭಾವಿಸುವ ಪ್ರಸ್ತುತ ಕಾಲಘಟ್ಟದಲ್ಲಿ, ಇದ್ಯಾವುವೂ ಇಲ್ಲದೆ ಕೃಷಿಯನ್ನು ಮಾಡುತ್ತಿರುವ ಕಂಠೇಶ್ ಪ್ರತ್ಯೇಕವಾಗಿ ಕಾಣುತ್ತಾರೆ.

**ಸಂಪಾದಕರು : ನಾ. ಕಾರಂತ ಪೆರಾಜೆ**

# ಊಟದ ಅಕ್ಕಿಗಾಗಿ ಬೀಜ ಬ್ಯಾಂಕ್ ಕಟ್ಟಿದವರು...

**ಊಟದ ಅಕ್ಕಿಗಾಗಿ ಬೀಜ ಬ್ಯಾಂಕ್ ಕಟ್ಟಿದವರು...**

ನಾಲಿಗೆಗೆ ರುಚಿಸುವ, ಮನಸ್ಸಿಗೆ ಹಿತ ನೀಡುವ ಊಟದ ಅಕ್ಕಿಗಾಗಿ ಹುಡುಕಾಟ ಆರಂಭಿಸಿದ ಯೆಡೇಹಳ್ಳಿ ರೈತರಿಗೆ ಕಳೆದು ಹೋಗಿದ್ದ ಅನೇಕ ದೇಸಿ ಭತ್ತದ ತಳಿಗಳು ಲಭ್ಯವಾದವು. ಆ ಬೀಜಗಳನ್ನು ಸಂಗ್ರಹಿಸಿಡುವುದಕ್ಕಾಗಿ ಸಮುದಾಯ ಬೀಜ ಬ್ಯಾಂಕ್ ಆರಂಭಿಸಿದರು.

ನಮಗೆ ಊಟಕ್ಕೊಂದು ಒಳ್ಳೆಯ ಅಕ್ಕಿ ಕೊಡಿ! - ದೇಸಿ ಭತ್ತದ ತಳಿ ಹುಡುಕಾಟದ ಸಭೆಯಲ್ಲಿ ಕುಳಿತಿದ್ದ ಬೇಸಾಯ ತಜ್ಞರು, ಚಳುವಳಿಕಾರರು, ಬಿತ್ತನೆ ಬೀಜ ಪರಿಣಿತರ ಮುಂದೆ ಮಲೆನಾಡಿನ ಭತ್ತ ಬೆಳೆಗಾರರ ಪ್ರತಿನಿಧಿಯಾಗಿ ಯೆಡೇಹಳ್ಳಿಯ ವೈ.ಸಿ.ರುದ್ರಪ್ಪನವರು ಹೀಗೊಂದು ಮನವಿ ಮಾಡಿದರು !

ಅರೆ, ಎಕರೆಗಟ್ಟಲೆ ಭತ್ತದ ಗದ್ದೆಗಳಿವೆ. ಟನ್‌ಗಟ್ಟಲೆ ಅಕ್ಕಿ ಬೆಳೆಯುತ್ತಾರೆ ನಾಡಿಗೇ ಅನ್ನ ಉಣ್ಣಿಸುವ ಸಕಲೇಶಪುರದಲ್ಲಿ ಊಟದ ಅಕ್ಕಿಗೆ ಬರವೇ ? ಸಭೆಯಲ್ಲಿದ್ದವರು ಮರು ಪ್ರಶ್ನೆ ಹಾಕಿದರು.

ಅದು ಹಾಗಲ್ಲ ಸರ್ ರುದ್ರಪ್ಪನವರು ಮಾತು ಮುಂದುವರಿಸಿದರು. ನಾವು ಟನ್‌ಗಟ್ಟಲೆ ಭತ್ತ ಬೆಳೆಯುತ್ತೇವೆ. ಅವೆಲ್ಲ ಮಾರಾಟಕ್ಕಾಯಿತು. ನಮಗೆ ಆಲೂರು ಸಣ್ಣ, ನೆಟ್ಟೆ ಬೆಳ್ಳಕ್ಕಿಯಂತಹ ರುಚಿಕಟ್ಟಾದ ಊಟದ ಅಕ್ಕಿ ಬೇಕು ಅಂತ ತಮ್ಮ ಮನವಿಯ ಅರ್ಥವನ್ನು ವಿವರಿಸಿದರು.

ನಿಜ, ಸಕಲೇಶಪುರ ತಾಲ್ಲೂಕಿನಲ್ಲಿ ನೂರಾರು ಎಕರೆ ಭತ್ತದ ಗದ್ದೆಗಳಿವೆ. ಸಾವಿರಾರು ಟನ್ ಭತ್ತ ಬೆಳೆಯುತ್ತಾರೆ. ಹೇರಳವಾದ ಅಕ್ಕಿಯೂ ಉತ್ಪಾದನೆಯಾಗುತ್ತದೆ. ಆದರೂ ಈ ಭಾಗದ ರೈತರಿಗೆ ಊಟಕ್ಕೊಂದು ಒಳ್ಳೆ ಅಕ್ಕಿ ಇಲ್ವಲ್ಲಾ ಎಂಬ ಕೊರಗು ಇದೆ.

ಒಂದು ಕಾಲದಲ್ಲಿ ಸಕಲೇಶಪುರದ ಸುತ್ತ ಆಲೂರು ಸಣ್ಣ, ಗೌರಿಸಣ್ಣ, ಹೊಳೆಸಾಲು ಚಿಪ್ಪಿಗ, ಘಂಸಾಲೆ, ದಪ್ಪಭತ್ತ, ನೆಟ್ಟೆ ಬೆಳ್ಳಕ್ಕಿ, ಕ್ಯಾಸರಿ(ಕಿರುವಾಣ), ರಾಮಮುಡಿ ಯಂತಹ ಹತ್ತಾರು ದೇಸಿ ಭತ್ತದ ತಳಿಗಳಿದ್ದವು ಎಂದು ಹಿರಿಯ ರೈತರು ನೆನಪಿಸಿಕೊಳ್ಳುತ್ತಾರೆ. ಆಗ ಊಟಕ್ಕೊಂದು, ದನಕರುಗಳಿಗೊಂದು, ಹಬ್ಬಹಬ್ಬಕ್ಕೂ ಒಂದು, ಮಾರಾಟಕ್ಕೊಂದು ಹೀಗೆ ಎಲ್ಲದಕ್ಕೂ ಒಂದೊಂದು ತಳಿಗಳಿದ್ದವು. ಹಸಿರು ಕ್ರಾಂತಿ ನಂತರ ಹೈಬ್ರಿಡ್ ತಳಿಗಳು ಕಾಲಿಟ್ಟಿದ್ದೇ ಇಟ್ಟಿದ್ದು, ಎಲ್ಲ ದೇಸಿ ತಳಿಗಳೆಲ್ಲ ಒಂದೊಂದಾಗಿ ನಾಪತ್ತೆಯಾದವು. ಅವುಗಳ ಜಾಗದಲ್ಲಿ ಈಗ ಅಧಿಕ ಇಳುವರಿ ಹೆಸರಿನ ಇಂಟಾನ್ ಮತ್ತು ಕ್ರಾಸ್ ಇಂಟಾನ್ ಎರಡು ಹೈಬ್ರಿಡ್ ತಳಿಗಳಷ್ಟೇ ಉಳಿದಿವೆ.

**ಪತ್ತೆಯಾದ ದೇಸಿ ತಳಿ ಮಾಹಿತಿ**

ಮೂರು ವರ್ಷಗಳ ಹಿಂದೆ ಭೂಮಿ ಸುಸ್ಥಿರ ಅಭಿವೃದ್ಧಿ ಸಂಸ್ಥೆ ಈ ವಿಚಾರವನ್ನು ಪತ್ತೆ ಹಚ್ಚಿತು. ಸಕಲೇಶಪುರ ತಾಲ್ಲೂಕು ಯೆಡೇಹಳ್ಳಿಯಲ್ಲಿ ಸಾವಯವ ಗ್ರಾಮ ಅನುಷ್ಠಾನದ ವೇಳೆ ತಳಿ ಸಮೀಕ್ಷೆ ಮಾಡಿದಾಗ, ಸಂಸ್ಥೆಗೆ ದೇಸಿ ತಳಿಗಳ ಮಾಹಿತಿ ಲಭ್ಯವಾಯಿತು. ಅನೇಕ ರೈತರಿಗೆ ಈಗಲೂ ದೇಸಿ ತಳಿಗಳ ಮೇಲಿನ ಆಸಕ್ತಿಯಿರುವುದು, ಅವುಗಳನ್ನು ಸಂರಕ್ಷಿಸಬೇಕು, ಮತ್ತೆ ನಮ್ಮ ನೆಲದಲ್ಲಿ ನಾಟಿ ಮಾಡಬೇಕೆಂಬ ಹಂಬಲವಿರುವುದನ್ನು ಸಂಸ್ಥೆ ಗುರುತಿಸಿತು.

ಇದೇ ಸಮಯದಲ್ಲಿ ರಾಜ್ಯದಲ್ಲಿ ಆರಂಭವಾಗಿದ್ದ ಭತ್ತ ಉಳಿಸಿ ಆಂದೋಲನ ಯಿಡೇಹಳ್ಳಿಯಲ್ಲಿ ದೇಸಿ ತಳಿಗಳ ಪ್ರಾಮುಖ್ಯ ಕುರಿತು ಆಂದೋಲನ ನಡೆಸಿತು. ಇದರಿಂದ ಉತ್ತೇಜಿತಗೊಂಡ ಯೋಜನೆಯ ಫಲಾನುಭವಿಗಳೆಲ್ಲ ಸಂಸ್ಥೆಯ ಮಾರ್ಗದರ್ಶನದಲ್ಲಿ ದೇಸಿ ತಳಿ ಉಳಿಸಲು ಸಂಕಲ್ಪ ಮಾಡಿದರು. ಊರಿನಿಂದ ನಾಪತ್ತೆಯಾದ ಭತ್ತದ ತಳಿಗಳ ಹುಡುಕಾಟ ಆರಂಭಿಸಿದರು.

**ದೇಸಿ ತಳಿ ಹುಡುಕಾಟದ ಹಾದಿಯಲ್ಲಿ**

ನಾಪತ್ತೆಯಾಗಿರುವ ತಳಿಗಳನ್ನು ಪತ್ತೆ ಹಚ್ಚುವುದಾದರೂ ಹೇಗೆ ? - ಇದಕ್ಕಾಗಿ ನಾಡಿನ ಭತ್ತ ಸಂರಕ್ಷಕರ ಸಹಕಾರ ಪಡೆಯುವುದಕ್ಕೆ ರೈತರು ತೀರ್ಮಾನಿಸಿದರು. ಸಿಕ್ಕಿ ಸಿಕ್ಕಿದ ಗೆಳೆಯರಿಗೆ ನಿಮ್ಮೂರಿನಲ್ಲಿ ಈ ಭತ್ತ ತಳಿ ಇದೆಯಾ ? ಇದ್ದರೆ ನಮಗೆ ತಿಳಿಸಿ. ಹಿಡಿಯಷ್ಟಾದರೂ ಸಾಕು ಮಾರಾಯ್ರೆ ಎಂದು ದುಂಬಾಲು ಬಿದ್ದರು. ಹೀಗೆ ತಳಿಗಳ ಹುಡುಕಾಟ ನಡೆಸಿದಾಗ ಸಕಲೇಶಪುರದ ಸುತ್ತ ನಾಲ್ಕೈದು ದೇಸಿ ಭತ್ತದ ತಳಿಗಳು ಹಿಡಿಯಷ್ಟು ಪ್ರಮಾಣದಲ್ಲಿ ಲಭ್ಯವಾದವು. ಆ ತಳಿಗಳನ್ನು ನಿಸರ್ಗ ಸಾವಯವ ಕೃಷಿ ಸಂಘ ಜೋಪಾನ ಮಾಡಿತು.

ತಳಿ ಸಂಗ್ರಹಿಸಿದ ನಂತರ ಅದನ್ನು ಆಸಕ್ತ ರೈತರಿಗೆ ತಮ್ಮ ಗದ್ದೆಗಳಲ್ಲಿ ಪ್ರತ್ಯೇಕ ಪಟ್ಟೆಗಳಲ್ಲಿ ಸಾವಯವ ವಿಧಾನದಲ್ಲಿ ಬೆಳೆಸಲು ಸಲಹೆ ನೀಡಲಾಯಿತು. ಕಟಾವಿನ ಹಂತದಲ್ಲಿ ನಾಡಿನ ತಳಿ ಪರಿಣತ ರೈತರನ್ನು ಆಹ್ವಾನಿಸಿ ತೆನೆ ಆಯ್ಕೆ ಮಾಡಿಸಿ, ತಳಿಗಳನ್ನು ಶುದ್ಧಗೊಳಿಸಲಾಯಿತು. ಈ ಪ್ರಕ್ರಿಯೆ ಹೀಗೇ ಮುಂದುವರೆದು ಒಟ್ಟು 18 ದೇಸಿ ತಳಿಗಳನ್ನು ಸಂಗ್ರಹಿಸಿ, ಬೆಳೆಸಲಾಯಿತು ಎಂದು ಸಂಸ್ಥೆಯ ನಿರ್ದೇಶಕ ಜಯಪ್ರಸಾದ್ ಬಳ್ಳೇಕೆರೆ ತಳಿ ಆಯ್ಕೆ ವಿಧಾನ ವಿವರಿಸುತ್ತಾರೆ.

**ರೈತರ ಗದ್ದೆಯಲ್ಲೇ ತಳಿ ಪ್ರಾತ್ಯಕ್ಷಿಕೆ**

ತಳಿ ಹುಡುಕ್ಕಿದ್ದಾಯಿತು. ಬೆಳೆಸಿದ್ದೂ ಆಯಿತು. ಅವುಗಳನ್ನು ದ್ವಿಗುಣ ಗೊಳಿಸಬೇಕು. ದಾರಿ ಯಾವುದಯ್ಯ? ಎಂದು ಚಿಂತಿಸುತ್ತಿದ್ದ ವೇಳೆಯಲ್ಲಿ ನಿಸರ್ಗ ಸಾವಯವ ಕೃಷಿ ಸಂಘದ ಸದಸ್ಯರಲ್ಲೊಬ್ಬರಾದ ಕಾಡುಗದ್ದೆಯ ಚಿದಂಬರ ತಾನು 10 ಗುಂಟೆ ಸ್ಥಳದಲ್ಲಿ ಈ ಹದಿನೆಂಟು ತಳಿಗಳನ್ನು ಬೆಳೆಸಲು ಒಪ್ಪಿದರು. ಧೋ ಎಂಬ ಮಳೆಯ ನಡುವೆಯೇ ಹದಿನೆಂಟು ತಳಿಗಳನ್ನು ಪ್ರತ್ಯೇಕವಾಗಿ ಬಿತ್ತನೆ ಮಾಡಿದರು. ಅದಕ್ಕೂ ಮುಂದೆ ಪ್ರತಿಯೊಂದು ತಳಿಯ ಬೀಜಗಳನ್ನು ಉಪಚರಿಸಿದರು.

ತಿಂಗಳು ಕಳೆದು ಭತ್ತದ ತೆನೆಗಳು ತೊನೆದಾಡುವಾಗ ಅದರ ಅಂದವನ್ನು ಕಣ್ತುಂಬಿಕೊಂಡ ರೈತರ ಮೊಗದಲ್ಲಿ ಗೆಲುವಿನ ನಗೆ. ಈ ಸಂತೋಷವನ್ನು ಹಂಚಿಕೊಳ್ಳ ಬೇಕೆಂದು ದೇಸಿ ತಳಿ ಭತ್ತದ ಕ್ಷೇತ್ರೋತ್ಸವ ಮಾಡಬೇಕೆಂದು ತೀರ್ಮಾನಿಸಿದರು.

ಕ್ಷೇತ್ರೋತ್ಸವನ್ನು ಅರ್ಥಪೂರ್ಣವಾಗಿಸಬೇಕೆಂದು ನಿರ್ಧರಿಸಿದರು. ಅದಕ್ಕಾಗಿ ಪರಿಣತ ರೈತ ಮಿತ್ರರನ್ನು ಆಹ್ವಾನಿಸಿದರು. ಅವರನ್ನು ತೆನೆ ತುಂಬಿದ್ದ ದೇಸಿ ತಳಿಗಳ ಅಂಗಳಕ್ಕಿಳಿಸಿ ಕೈಗೊಂದೊಂದು ಬಣ್ಣದ ಪಟ್ಟಿಗಳನ್ನು ಕೊಟ್ಟು ಉತ್ತಮ ತಳಿ ಆಯ್ಕೆ ಹಾಗೂ ತಳಿ ಶುದ್ಧತೆ ಮಾಡುವಂತೆ ಮನವಿ ಮಾಡಿದರು. ಗೆಳೆಯರ ಮನವಿಗೆ ಒಪ್ಪಿದವರೆಲ್ಲರೂ ಪ್ರಾಮಾಣಿಕವಾಗಿ ಉತ್ತಮ ತಳಿಗಳನ್ನು ಆಯ್ಕೆ ಮಾಡಿದರು. ಮಾತ್ರ ವಲ್ಲ, ಅವುಗಳ ಬೀಜ ಪಡೆದು ಅಭಿವೃದ್ಧಿಪಡಿಸುವುದಾಗಿ ಸಂಕಲ್ಪ ಮಾಡಿದರು.

ದೇಸಿ ಭತ್ತದ ತಳಿಗಳ ಬಿತ್ತನೆ, ಕೊಯ್ಲು, ಬೀಜ ಸಂಗ್ರಹ ವಿಸ್ತರಣೆಗೊಳ್ಳುತ್ತಿದ್ದಂತೆ ಅವುಗಳನ್ನು ಒಂದು ಕಡೆ ಒಪ್ಪ ಮಾಡಬೇಕಾಯಿತು. ಈ ಪ್ರಕ್ರಿಯೆಗಾಗಿ ಆರಂಭ ವಾಗಿದ್ದೇ ಸಮುದಾಯ ದೇಸಿ ಭತ್ತ ತಳಿ ಬೀಜ ಬ್ಯಾಂಕ್.

**ಹಿಡಿ ಭತ್ತ ಕೊಟ್ಟು, ದುಪ್ಪಟ್ಟು ಸಂಗ್ರಹ**

ವಿಶ್ವ ಭೂಮಿ ದಿನಾಚರಣೆಯಂದು ಸಾಂಕೇತಿಕವಾಗಿ ಆರಂಭವಾದ ಸಮುದಾಯ ಬೀಜ ಬ್ಯಾಂಕ್ ನಂತರ ಚಿದಂಬರ ಅವರಂತೆ ಅನೇಕ ರೈತರು ದೇಸಿ ತಳಿಗಳನ್ನು ಸಂರಕ್ಷಿಸಲು ಆರಂಭಿಸಿದರು. ರೈತ ಲೋಹಿತಾಕ್ಷ ಅವರು ಬೀಜ ಬ್ಯಾಂಕ್‌ನಿಂದ ಒಂದು ಹಿಡಿ

ಘಂಸಾಲೆ ಭತ್ತದ ತಳಿ ಪಡೆದರು. 3 ವರ್ಷಗಳ ಕಾಲ ಈ ತಳಿಯನ್ನು ಬೆಳೆಸಿ, ಶುದ್ಧಗೊಳಿಸಿ, ನೆರೆಯ ರೈತರಿಗೂ ಹಂಚಿದರು. ಹಿಡಿ ಭತ್ತ ಕೊಟ್ಟಿದ್ದ ಬೀಜಬ್ಯಾಂಕಿಗೆ 100 ಕೆಜಿ ಭತ್ತವನ್ನು ಬೆಳೆದು ಕೊಡುವ ಮೂಲಕ ಲೋಹಿತಾಕ್ಷ ಅವರು ಸಮುದಾಯ ಬೀಜ ಬ್ಯಾಂಕ್ ಪರಿಕಲ್ಪನೆಯನ್ನು ಸಾಕಾರಗೊಳಿಸಿದರು.

ಬೀಜ ಬ್ಯಾಂಕ್ ಆರಂಭವಾದ ನಂತರ ಸಂಘದ ಅಧ್ಯಕ್ಷರಾದ ವೈ.ಸಿ. ರುದ್ರಪ್ಪನವರು ಒಂದು ಎಕರೆಯಲ್ಲಿ ರಾಜಮುಡಿ ತಳಿ ಬೆಳೆಸುತ್ತಿದ್ದಾರೆ. ಕುಂಬಾರಘಟ್ಟೆ ಕೃಷಿಕ ವೈ ಎಂ ರಾಜು ಒಂದು ಕೆ.ಜಿ ಚಿನ್ನಪೊನ್ನಿ ಭತ್ತವನ್ನು ಬೆಳೆದು ಶುದ್ಧಿಗೊಳಿಸಿದ್ದಾರೆ. ಕೇವಲ 110 ದಿನಗಳಿಗೆ ಕಟಾವಾಗುವ ಈ ತಳಿ ಬೇಸಿಗೆ ಕಾಲಕ್ಕೆ ಸೂಕ್ತವಾಗಿದೆ. ಉಳಿದ ತಳಿಗಳು 135-150 ದಿನಗಳಲ್ಲಿ ಕಟಾವಾಗುವುದರಿಂದ ಮುಂಗಾರಿನ ಮಳೆಗೆ ಸಿಕ್ಕಿ ಅಪಾರ ನಷ್ಟವಾಗುತ್ತಿತ್ತು. ಹಾಗಾಗಿ ಚಿನ್ನಪೊನ್ನಿ ಮಲೆನಾಡಿನ ಬೇಸಿಗೆ ಬೆಳೆಗೆ ಉತ್ತಮ ತಳಿ ಎಂಬುದು ರಾಜು ಅಭಿಪ್ರಾಯ.

ಪ್ರಾಯೋಗಿಕವಾಗಿ 2 ತಾಕುಗಳಲ್ಲಿ ಚಿನ್ನಪೊನ್ನಿ ಹಾಗೂ ಐ ಆರ್ 64 ತಳಿಗಳನ್ನು ಬೆಳೆದು ಈ ಭಾಗಕ್ಕೆ ಚಿನ್ನಪೊನ್ನಿ ಇಳುವರಿ, ಬೆಳವಣಿಗೆ, ರುಚಿ ಹಾಗೂ ವಾತಾವರಣಕ್ಕೆ ಸೂಕ್ತ ಎಂಬುದನ್ನು ಅವರು ಮನಗಂಡಿದ್ದಾರೆ.

ಯೆಡೇಹಳ್ಳಿಯ ನಿಸರ್ಗ ಸಂಘದವರ ಉತ್ಸಾಹ ಇಷ್ಟಕ್ಕೇ ನಿಂತಿಲ್ಲ. ಸದಸ್ಯರೆಲ್ಲ ಈಗ ಕಳೆದು ಹೋಗಿರುವ ಭತ್ತ ತಳಿಗಳ ಹುಡುಕಾಟ ಮುಂದುವರಿಸಿದ್ದಾರೆ. ಭತ್ತ ತಳಿಗಳು ಸಂಗ್ರಹ ವಿಸ್ತರಣೆಯಾಗುತ್ತಿದೆ. ಸ್ಥಳದ ಕೊರತೆಯಿಂದಾಗಿ ಆ ತಳಿಗಳನ್ನು ತಮ್ಮ ತಮ್ಮ ಮನೆಗಳಲ್ಲಿ ಸಂರಕ್ಷಿಸುತ್ತಿದ್ದಾರೆ. ಭವಿಷ್ಯದಲ್ಲಿ ರೈತರೆಲ್ಲ ಸಂಘದಿಂದಲೇ ಸಮುದಾಯ ಭವನ ನಿರ್ಮಿಸುವ ಯೋಚನೆ ಮಾಡಿದ್ದಾರೆ. ಅದರಲ್ಲಿ ಬೀಜ ಬ್ಯಾಂಕ್, ಗ್ರಂಥಾಲಯ, ಸಭಾಂಗಣ ಎಲ್ಲವೂ ನಿರ್ಮಿಸಬೇಕೆಂಬ ನೀಲ ನಕ್ಷೆ ಕೂಡ ಸಿದ್ಧವಾಗಿದೆ. ಹಣ ಹೊಂದಾಣಿಕೆಯಾದರೆ, ಮುಂದಿನ ವರ್ಷದಿಂದ ಸುಸಜ್ಜಿತ ಬೀಜ ಬ್ಯಾಂಕ್ ಯೆಡೇಹಳ್ಳಿಯಲ್ಲಿ ವಿಧ್ಯುಕ್ತವಾಗಿ ಆರಂಭವಾಗಲಿದೆ. ಮಾತ್ರವಲ್ಲ, ದೇಶದಲ್ಲೇ ಮೊದಲ ದೇಸಿ ಭತ್ತ ಬೀಜ ಬ್ಯಾಂಕ್ ಎಂಬ ಖ್ಯಾತಿಯನ್ನೂ ಪಡೆಯಲಿದೆ ಎನ್ನುತ್ತಾರೆ ಯೋಜನಾ ನಿರ್ದೇಶಕ ಜಯಪ್ರಸಾದ್ ಬಳ್ಳೇಕೆರೆ.

**ತಳಿ ಸಂರಕ್ಷಣೆಗೆ ಪ್ರೇರೇಪಿಸಿದ ಬೀಜ ಬ್ಯಾಂಕ್**

ಯೆಡೇಹಳ್ಳಿಯಲ್ಲಿ ಸಾಂಕೇತಿಕವಾಗಿ ಆರಂಭವಾದ ಸಮುದಾಯ ದೇಸಿ ಭತ್ತದ ತಳಿ ಬೀಜ ಬ್ಯಾಂಕ್ ಉದ್ಘಾಟನೆ ಸಮಾರಂಭಕ್ಕೆ ನೆರೆಯ ಚಿಕ್ಕಂದೂರು ರೈತರು ಆಗಮಿಸಿದ್ದರು. ಸಮಾರಂಭದ ನಂತರ ಕಳೆದು ಹೋದ ತಳಿಗಳ ಬಗ್ಗೆ ಚರ್ಚೆ ಆರಂಭವಾಯಿತು. ತಮ್ಮೂರಿನಿಂದ ಇಂಥ ತಳಿಗಳು ನಾಪತ್ತೆಯಾಗಿವೆ ಎಂದು ಯೆಡೆಹಳ್ಳಿ ರೈತರು ಪಟ್ಟಿ ಮಾಡುತ್ತಿದ್ದರು. ಪಟ್ಟಿ ಮಾಡುವಾಗ ನೆಟ್ಟಿ ಬೆಳ್ಳಕ್ಕಿ ಎಂಬ ಅಪರೂಪದ ದೇಸಿ ತಳಿ ಅವಶೇಷವಿಲ್ಲದಂತೆ ನಾಪತ್ತೆಯಾಗಿದೆ ಎಂಬ ವಿಷಯ ಚರ್ಚೆಗೆ ಬಂತು.

ಈ ಘಟನೆ ನಡೆದ ಎರಡು ಮೂರು ತಿಂಗಳ ನಂತರ ಚಿಕ್ಕಂದೂರಿನ ರೈತರೊಬ್ಬರು ನಮ್ಮೂರಿನಲ್ಲಿ ನೆಟ್ಟಿ ಬೆಳ್ಳಕ್ಕಿ ತಳಿ ಇದೆ ಎಂದು ಯೆಡೇಹಳ್ಳಿ ರೈತರಿಗೆ ಮಾಹಿತಿ ಕೊಟ್ಟರು. ಅಷ್ಟೇ ಅಲ್ಲ, ಯೆಡೇಹಳ್ಳಿ ಕಾರ್ಯಕ್ರಮದಿಂದ ಸ್ಫೂರ್ತಿಪಡೆದ ಚಿಕ್ಕಂದೂರಿನ ರೈತರು ತಮ್ಮೂರಿನಲ್ಲೂ ಹಳೆ ಭತ್ತದ ತಳಿಗಳನ್ನು ಸಂರಕ್ಷಿಸಲು ಆರಂಭಿಸಿದರು. ಬೀಜ ಸಂರಕ್ಷಣೆಗಾಗಿ

ಸಂಘ ರಚಿಸಿಕೊಂಡರು. ಸದಸ್ಯರೆಲ್ಲ ಹಸಿರು ಸಮವಸ್ತ್ರ ತೊಟ್ಟರು. ಶಿಸ್ತುಬದ್ಧವಾಗಿ ಭತ್ತದ ತಳಿಗಳನ್ನು ಬೆಳೆಸಿ, ಉಳಿಸಲು ಆರಂಭಿಸಿದರು. ಪ್ರಸ್ತುತ ಆ ಊರಿನಲ್ಲೂ ದೇಸಿ ಭತ್ತದ ತಳಿಗಳು ಸಂಗ್ರಹವಾಗಿವೆ.

- ಇದೇ ಅಲ್ಲವೇ ಮಾದರಿಯಾಗುವ ಪರಿ ಎಂದರೆ ?

***ಸಂಪಾದಕರು : ಜಯಪ್ರಸಾದ್ ಬಳ್ಳೇಕೆರೆ***

# ವಿಶ್ವಾಸ ಹೆಚ್ಚಿಸಿದ ಕೃಷಿ ಬದುಕು

**ವಿಶ್ವಾಸ ಹೆಚ್ಚಿಸಿದ ಕೃಷಿ ಬದುಕು**

ಎಕರೆಗಟ್ಟಲೆ ಜಮೀನಿದ್ದೂ ಪಟ್ಟಣದಲ್ಲಿ ಕೂಲಿ ಅರಸಿ ಹೋಗುವವರ ಸಂಖ್ಯೆ ಹೆಚ್ಚು. ಇಂಥ ಸಂಸ್ಕೃತಿಗೆ ಫಲ್ಗುಣಿಯ ಹರೀಶ್ ಅಪವಾದ. ತನ್ನ ನಾಲ್ಕೂವರೆ ಎಕರೆ ಜಮೀನಿನಲ್ಲಿ ಪುಟ್ಟ ಪುಟ್ಟ ತಂತ್ರಜ್ಞಾನಗಳನ್ನು ಬಳಸಿಕೊಂಡು ಸುಸ್ಥಿರ ಫಸಲು ಪಡೆಯುವ ಜೊತೆಗೆ ಕೃಷಿ ತಂತ್ರಜ್ಞಾನಗಳನ್ನು ಬಳಸುತ್ತಾ ಸಾವಯವ ಕೃಷಿಯತ್ತಲೂ ಹೆಜ್ಜೆ ಹಾಕಿದ್ದಾರೆ.
ಮೂಡಿಗೆರೆ ಸನಿಹದ ಫಲ್ಗುಣಿಯ ಹರೀಶ್ ಉದ್ಯೋಗವನ್ನರಸಿ ಇನ್ನೇನು ನಗರ ಸೇರುವುದರಲ್ಲಿದ್ದರು. ಅಕಸ್ಮಾತ್ ತಂದೆಯವರ ಅಗಲುವಿಕೆ. ತಾಯಿ, ಸಹೋದರಿಯರು ಮತ್ತು ಕೃಷಿಯ  ಹೊಣೆ ಹೆಗಲೇರಿತು. ನಗರದ ಆಶೆ ಕಮರಿತು. ತಂದೆಯ ಕೃಷಿ ದಾರಿ ಅನಿವಾರ್ಯವಾಯಿತು. ಬದುಕಿನ ಈ ತಿರುವನ್ನು ಹರೀಶ್ ಗೊಣಗಾಟವಿಲ್ಲದೆ ಸ್ವೀಕರಿಸಿದರು.

ನಾಲ್ಕು ಎಕರೆ ಹನ್ನೆರಡು ಗುಂಟೆ ಕೃಷಿ ಭೂಮಿ. ಅದರಲ್ಲಿ ಸಾವಿರದೈನೂರು ಅಡಿಕೆ ಮರಗಳು, ಏಳುನೂರು ರೋಬಸ್ಟಾ ಕಾಫಿ ಮತ್ತು ಬಾಳೆ ಕೃಷಿ. ಹರೀಶ್ ತೋಟಕ್ಕಿಳಿದಾಗ ಕೃಷಿ ವಿಚಾರ ಏನೂ ಗೊತ್ತಿರಲಿಲ್ಲ. ತಂದೆಯಿಂದ ಏನೂ ಕಲಿತಿರಲಿಲ್ಲ. ಅಷ್ಟು ಆಸಕ್ತಿಯೂ ಇದ್ದಿರಲಿಲ್ಲ. ಕೃಷಿ ವಿಚಾರಗಳಲ್ಲಿ ಒಂದೊಂದೇ ಹೆಜ್ಜೆಗಳನ್ನು ಊರುವುದಕ್ಕೆ ಪ್ರಯತ್ನ.

ಜೀವನಕ್ಕಾಗಿ ಹಣ ಉಳಿಸಬೇಕೆಂಬ ಛಲ. ವಾಣಿಜ್ಯ ಬೆಳೆಯತ್ತ ಆಲೋಚನೆ. ಅಡಿಕೆ, ಕಾಫಿಯ ಜತೆ ಬೇಗನೆ ಹಣ ಬರುವ ಬಾಳೆಯನ್ನೂ ಬೆಳೆದರೆ ಹೇಗೆ? ಪತ್ರಿಕೆಯೊಂದರಲ್ಲಿ ಓದಿದ್ದ ಬಾಳೆಯ ಸಾಂದ್ರ ಬೇಸಾಯ ವಿಚಾರಗಳು ಪ್ರೇರೇಪಿಸಿತು. ಆಗಲೇ ಸಾಂದ್ರ ವಿಧಾನದಲ್ಲಿ ಬಾಳೆ ಬೆಳೆಸುತ್ತಿದ್ದ ತೋಟಗಳ ಭೇಟಿ. ಈ ಕುರಿತು ಮಾಹಿತಿ ಸಂಗ್ರಹ

ಹೈಡೆನ್ಸಿಟಿ ವಿಧಾನ ಅಂದರೆ ಒತ್ತೊತ್ತಾಗಿ ಗಿಡಗಳನ್ನು ನೆಡುವುದು. ಇತರ ಬಾಳೆ ಕೃಷಿಗಿಂತ ಭಿನ್ನ. ಗಿಡದಿಂದ ಗಿಡಕ್ಕೆ ಮೂರೂವರೆ ಅಡಿ, ಸಾಲಿಂದ ಸಾಲಿಗೆ ನಾಲ್ಕಡಿ ಸಾಲುಗಳ ತಯಾರಿ. ಮಧ್ಯೆ ನೀರಿನ ಹರಿವಿಗೆ ಕಾಲುವೆ. ಒಂದು ಎಕರೆಯಲ್ಲಿ ಸುಮಾರು 2,260 ಗಿಡಗಳು. ಹರೀಶ್ ನಾಲ್ಕು ಸಾವಿರ ಬಾಳೆ ಗಿಡಗಳನ್ನು ಎರಡು ವಿಭಾಗ ಮಾಡಿ ನೆಟ್ಟಿದ್ದಾರೆ.

ಬಾಳೆ ಹೊಂಡವನ್ನು ತೆಗೆಯಲು ಕಾರ್ಮಿಕರನ್ನು ಬಳಸಿಕೊಂಡಿದ್ದರೆ ಇಷ್ಟಕ್ಕೆ ಹದಿನೈದು ಸಾವಿರ ವೆಚ್ಚವಾಗುತ್ತಿತ್ತು. ನಾನು ಟ್ರಾಕ್ಟರ್ ಮೂಲಕ ಹೊಂಡ ಮಾಡಿದ್ದರಿಂದ ಸಾವಿರದೈನೂರು ರೂಪಾಯಿ ವೆಚ್ಚವಾಗಿದೆ ಎನ್ನುತ್ತಾರೆ.

ನಾಟಿ ಮಾಡಿದ 7-8 ತಿಂಗಳಿಗೆ ಕೊಯ್ಲಿಗೆ ಸಿದ್ಧ. ಮೂವತ್ತು ದಿವಸಗಳ ಅಂತರದಲ್ಲಿ ರಸಗೊಬ್ಬರ ಉಣಿಕೆ. ಎದುರುಬದುರು ಗೊನೆ ಬಿಡುವಂತೆ ಗಿಡಗಳನ್ನು ನೆಟ್ಟಿರುವುದರಿಂದ ಪ್ರತೀ ಗೊನೆಗೂ ಆಧಾರ ಕೊಡುವ ಕೆಲಸವನ್ನು ಕಡಿಮೆ ಮಾಡಿಕೊಂಡಿದ್ದಾರೆ. ಗೊನೆನಿಂದ ಗೊನೆಗೆ ಹಗ್ಗದ ಸಹಾಯದಿಂದ ಆಧಾರ.

ಒಂದೊಂದು ಬಾಳೆಗೊನೆ ಏನಿಲ್ಲವೆಂದರೂ ಸರಾಸರಿ ಇಪ್ಪತ್ತು ಕಿಲೋ ತೂಗುತ್ತದೆ. ಹೆಚ್ಚು ಗೊಬ್ಬರ ಉಣಿಸಿದರೆ ಗೊನೆಯ ಸೈಜ್ ದೊಡ್ಡದಾಗುತ್ತದೆ. ಮಾರಾಟ ಮಾಡಲು ಕಷ್ಟ.  ಸಣ್ಣ ಅಂಗಡಿಯವರಿಗೆ ಇಪ್ಪತ್ತು ಕಿಲೋ ತೂಗುವ ಗೊನೆ ಓಕೆ. ದೊಡ್ಡ ಗೊನೆಯಾದರೆ ನಾನು ಬೆಂಗಳೂರಿಗೆ  ಒಯ್ಯಬೇಕಷ್ಟೇ. ಸಾಗಾಟ ಬೇರೆ ತಲೆನೋವು. ಬೆಲೆ ಸಿಗಬಹುದೆಂಬ ಗ್ಯಾರಂಟಿ ಇಲ್ಲ ಎನ್ನುತ್ತಾರೆ ಹರೀಶ್. ಸ್ಥಳೀಯ ವ್ಯಾಪಾರಸ್ಥರು ಅಲ್ಲದೆ ಮಂಗಳೂರಿನವರೆಗೂ ವ್ಯಾಪಾರ ಕುದುರಿಸಿಕೊಂಡಿದ್ದಾರೆ. ಶೃಂಗೇರಿ, ಬಾಳೆಹೊನ್ನೂರಿಗೆ ಚಿಪ್ಸ್‌ಗಾಗಿ ಗೊನೆ ಒಯ್ಯುತ್ತಾರಂತೆ.

ಇನ್ನೇನು ತಿಂಗಳೊಳಗೆ ಪೂರ್ತಿ ಕಟಾವ್ ಮುಗಿದಿರುತ್ತದೆ. ಗೊನೆಬಿಟ್ಟ ಗಿಡದ ಬುಡದಲ್ಲಿ ಚಿಗುರೊಡೆದ ಕಂದನ್ನು ಮುಂದಿನ ಬೆಳೆಗಾಗಿ ಬೆಳೆಸುತ್ತಾರೆ. ಗೊನೆ ಕಡಿದು ಬಿದ್ದ ಗಿಡವನ್ನು ಅಲ್ಲೇ ತುಂಡರಿಸಿ ಹಾಕುತ್ತೇನೆ. ಅದು ಕೊಳೆತು ಕಾಂಪೋಸ್ಟ್ ಆಗುತ್ತದೆ ಎನ್ನುವ

ಹರೀಶ್, ಇಪ್ಪತ್ತು ಕಿಲೋ ತೂಗುವ ಗೊನೆಗೆ ಈಗಿನ ಮಾರುಕಟ್ಟೆ ದರದಂತೆ ನೂರು ರೂಪಾಯಿ ಸಿಗಬೇಕು. ಅದರಲ್ಲಿ 30-35 ರೂಪಾಯಿ ಖರ್ಚು ಬಂದರೂ, ಉಳಿದ 65-70 ರೂಪಾಯಿ ಲಾಭ ಎನ್ನಲು ಅವರಿಗೆ ಖುಷಿ.

ಬಾಳೆ ಗಿಡ ಚಿಕ್ಕದಾಗಿದ್ದಾಗ ಅದರ ಮಧ್ಯೆ ಮಿಶ್ರ ಕೃಷಿ. ಒಂದು ಭಾಗದಲ್ಲಿ ಬೀನ್ಸ್, ಮತ್ತೊಂದರಲ್ಲಿ ಕ್ಯಾಪ್ಸಿಕಮ್ (ದೊಣ್ಣೆ ಮೆಣಸು). ಒಂದೂವರೆ ಟನ್ ಕ್ಯಾಪ್ಸಿಕಮ್ ಇಳುವರಿ ಸಿಕ್ತು. ಎಂಭತ್ತೇಳು ಸಾವಿರ ಲಾಭ ಬಂತು. ಇದರಲ್ಲಿ ಮೂವತ್ತು ಸಾವಿರ ಖರ್ಚು ಬಿಟ್ಟರೆ ಉಳಿದುದು ಕಿಸೆಗೆ. ಬೀನ್ಸ್ ಒಂದುಮುಕ್ಕಾಲು ಟನ್ ಇಳುವರಿ ಬಂದಿತ್ತು. ಚಿಕ್ಕಮಗಳೂರು ಎಪಿಎಂಸಿ ಮಾರ್ಕೆಟ್‌ನಲ್ಲಿ 14-20 ರೂಪಾಯಿ ತನಕ ದರ ಸಿಕ್ಕಿತ್ತು ಎನ್ನುವಾಗ ಹರೀಶ್ ಖುಷ್. ಇವೆಲ್ಲಾ 3-4 ತಿಂಗಳ ಉಪ ಕೃಷಿ.

ಸರಕಾರದ ಸಾವಯವ ಕೃಷಿ ಯೋಜನೆಯನ್ನು ಅನುಷ್ಠಾನ ಮಾಡಲು ಭೂಮಿ ಸುಸ್ಥಿರ ಕೃಷಿ ಅಭಿವೃದ್ಧಿ ಸಂಸ್ಥೆಯು ಜವಾಬ್ದಾರಿ ಹೊತ್ತು, ಫಲ್ಗುಣಿಯಲ್ಲಿ ಕಾರ್ಯವೆಸಗುತ್ತಿದ್ದಾಗ, ಹರೀಶ್‌ಗೆ ಸಾವಯವದತ್ತ ಒಲವು ಮೂಡಿತು. ನಾಲ್ಕು ಎಕರೆಯನ್ನು ಪೂರ್ತಿ ಸಾವಯವದತ್ತ ಬದಲಾಯಿಸಿದರೆ ಇಳುವರಿ ಕೈಕೊಟ್ಟರೆ ಎಂಬ ಭಯ. ಸದ್ಯ ಒಂದೂವರೆ ಎಕರೆಯಲ್ಲಿ ಕಾಫಿ ಮತ್ತು ಅಡಿಕೆಯನ್ನು ಸಾವಯವ ವಿಧಾನದಲ್ಲಿ ಬೆಳೆಸುತ್ತಿದ್ದಾರೆ.

ದನದ ಕೊಟ್ಟಿಗೆಗೂ, ಸಾವಯವ ಕೃಷಿ ಮಾಡುವ ತೋಟಕ್ಕೆ ಸುಮಾರು ಒಂದೂವರೆ ಕಿಲೋಮೀಟರ್ ಅಂತರ. ಹಟ್ಟಿಯಲ್ಲಿ ಉತ್ಪಾದನೆಯಾದ ಗೊಬ್ಬರವನ್ನೋ, ತಯಾರಾದ ಕಾಂಪೋಸ್ಟನ್ನೋ ಸಾಗಿಸುವುದು ಶ್ರಮಬೇಡುವ ಕೆಲಸ. ಅದಕ್ಕೊಂದು ಉಪಾಯ ಕಂಡುಕೊಂಡಿದ್ದಾರೆ. ತೋಟ ಪ್ರವೇಶಿಸುವ ದಾರಿ ಪಕ್ಕ ಗೊಬ್ಬರದ ಗುಂಡಿಗಳನ್ನು ಮಾಡಿದ್ದಾರೆ. ಬಾಳೆತ್ಯಾಜ್ಯ, ಕೃಷಿ ತ್ಯಾಜ್ಯಗಳು ಇಲ್ಲಿ ಕಾಪೋಸ್ಟ್ ಆಗುತ್ತವೆ. ಇಂತಹುದೇ ಗೊಬ್ಬರದ ಹೊಂಡಗಳು ತೋಟದೊಳಗೂ ಇದೆ. ಹಟ್ಟಿ ತ್ಯಾಜ್ಯಕ್ಕೆ ಬೇರೊಂದು ಹೊಂಡ. ಪೈಪ್ ಮೂಲಕ ಸ್ಲರಿಯನ್ನು ಗಿಡಗಳ ಬುಡಕ್ಕೆ ಹಿಡಿಯುವಂತಹ ವ್ಯವಸ್ಥೆ. ಸ್ವಲ್ಪ ಇಳಿಜಾರಾದ ಭೂಮಿಯಾದ್ದರಿಂದ ಸುಲಭದಲ್ಲಿ ತ್ಯಾಜ್ಯ ಪೈಪ್ ಮೂಲಕ ಹರಿಯುತ್ತದೆ. ಎರೆಗೊಬ್ಬರದ ಹೊಂಡಗಳೂ ಇವೆ.

ಕಳೆದ ಮೂರು ವರುಷಗಳಿಂದ ಎಂಟು ಟನ್ ಎರೆಗೊಬ್ಬರ, ಆರು ಟನ್ ಹಸಿರೆಲೆಗೊಬ್ಬರ, ಇಪ್ಪತ್ತನಾಲ್ಕು ಕ್ವಿಂಟಾಲ್ ಕೊಟ್ಟಿಗೆ ಗೊಬ್ಬರ ಸಿಕ್ಕಿದೆ ಎಂಬ ಲೆಕ್ಕವನ್ನು ಕೊಡುವ ಹರೀಶ್, ಸಾಮಾನ್ಯ ಪದ್ಧತಿಯಲ್ಲಿ ಕೃಷಿ ಮಾಡಿದರೆ ಉತ್ಪನ್ನಗಳಿಗೆ ಮಾರ್ಕೆಟ್ ಮನೆಬಾಗಿಲಿಗೆ ಬರುತ್ತದೆ. ಸಾವಯವದಲ್ಲಿ ಸ್ವಲ್ಪ ಖರ್ಚು ಹೆಚ್ಚಾಗುತ್ತದೆ. ಮಾರುಕಟ್ಟೆಗೆ ಹುಡುಕಾಡಬೇಕು ಎನ್ನುತ್ತಾರೆ.

ಅಮ್ಮ ಚಂದ್ರಾವತಿ, ಅಜ್ಜಿ, ಅಕ್ಕ ಮತ್ತು ತಂಗಿ - ಹರೀಶರ ಕುಟುಂಬ. ಅಕ್ಕ ಎಂ.ಬಿ.ಎ. ಓದಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ. ತಂಗಿ ರಾಜಧಾನಿಯಲ್ಲಿ ಸಿಎ ಅಭ್ಯಾಸ ಮಾಡುತ್ತಿದ್ದಾರೆ. ಮನೆಯ ಅಷ್ಟೂ ಜವಾಬ್ದಾರಿಯನ್ನು ಹರೀಶ್ ಒಬ್ಬರ ಕೃಷಿ ಸಂಪಾದನೆ ಭರಿಸುತ್ತದೆ. 2002ರಿಂದ ಕೃಷಿಯ ಸಂಪರ್ಕಕ್ಕೆ ಬಂದ ಹರೀಶ್‌ರಿಗೆ ಈಗ ಆತ್ಮವಿಶ್ವಾಸ ಬಂದಿದೆ.

**ಸಂಪಾದಕರು : ನಾ. ಕಾರಂತ ಪೆರಾಜೆ**

# ಗೊಬ್ಬರದ ತೊಟ್ಟಿ ಸುತ್ತ ಸಮೃದ್ಧ ಕೈ ತೋಟ

**ಗೊಬ್ಬರದ ತೊಟ್ಟಿ ಸುತ್ತ ಸಮೃದ್ಧ ಕೈ ತೋಟ**

ಕೈ ತೋಟ ಮಾಡಲು ಜಾಗವಿಲ್ಲ ಎನ್ನುವವರಿಗೆ ಯಡೇಹಳ್ಳಿಯ ಶಿವಪ್ಪ ಜಾಗ ತೋರಿಸುತ್ತಾರೆ. ಅವರು ತಮ್ಮ ಗೊಬ್ಬರದ ಗುಂಡಿ ಸುತ್ತಲೂ ಕೈತೋಟ ಮಾಡಿದ್ದಾರೆ.

ಮನೆ ಹಿಂದೋ, ಮುಂದೋ ಕೈ ತೋಟ ಮಾಡ್ಕೊಳ್ಳಿ ಅಂತ ಯಾರಿಗಾದ್ರೂ ಪುಕ್ಕಟ್ಟೆ ಸಲಹೆ ಕೊಟ್ರೆ, ನಾವಿರೋದಕ್ಕೇ ಜಾಗವಿಲ್ಲ. ಇನ್ನು ತರಕಾರಿ ಎಲ್ಲಿ ಬೆಳೆದುಕೊಳ್ಳೋದು ಎನ್ನುತ್ತಾರೆ. ಇನ್ನು ಕೆಲವರು ನನಗೆ ತರಕಾರಿ ಬೆಳೆಯೋದಕ್ಕೆ ಇಷ್ಟ ರೀ, ಆದ್ರೆ ಏನ್ಮಾಡ್ಲಿ, ಮುಂದೆ ಗಾಡಿ ಪಾರ್ಕ್ ಮಾಡ್ತಾರೆ. ಹಿಂದೆ ಆಕಳು ಕೊಟ್ಟಿಗೆ, ಅತ್ತಕಡೆ ಕೊಟ್ಟಿಗೆ ಗೊಬ್ಬರ, ಇತ್ತ ಕಡೆ ಹುಲ್ಲಿನ ಬವಣೆ.. ಇನ್ನೆಲ್ಲಿ ಬೆಳೆಯೋದು.. ಅಂತ ಏನೇನೋ ನೆಪ ಹೇಳ್ತಾರೆ.

ಆದರೆ ಸಕಲೇಶಪುರ ತಾಲ್ಲೂಕು ಯಡೇಹಳ್ಳಿಯ ಶಿವಪ್ಪ ಹೀಗೆ ಸೋಗು ಹೇಳುವವರಿಗಿಲ್ಲಿ ಉತ್ತರ ನೀಡುವಷ್ಟರಮಟ್ಟಿಗೆ ಪುಟ್ಟ ಜಾಗದಲ್ಲಿ ಏಳೆಂಟು ವಿಧದ ತರಕಾರಿ ಬೆಳೆದ್ದಿದಾರೆ. ಅದು ಎಲ್ಲಿ ಗೊತ್ತಾ? ಎರೆಗೊಬ್ಬರದ ತೊಟ್ಟಿ ಸುತ್ತ.

**ತರಕಾರಿ ಬೆಳೆದ ಪರಿ :**

ಶಿವಪ್ಪ ಅವರಿಗೆ ಇರುವುದು 10 ಗುಂಟೆ ಜಮೀನು. ಅದರಲ್ಲಿ ವಾಸಕ್ಕೆ ಮನೆ, ಆಕಳುಗಳಿಗೆ ಕೊಟ್ಟಿಗೆ. ಉಳಿದ ಸ್ಥಳದಲ್ಲಿ ಒಂದಷ್ಟು ಕಾಫಿ, ಕಾಳುಮೆಣಸಿನ ಬಳ್ಳಿಗಳು, ಹಣ್ಣಿನ ಗಿಡಗಳಿವೆ. ಇವೆಲ್ಲದರ ನಡುವೆ ಇರುವ ಗೊಬ್ಬರದ ಗುಂಡಿಯ ಸುತ್ತಾ ಹತ್ತಾರು ವಿಧದ ತರಕಾರಿ ಗಿಡಗಳನ್ನು ಬೆಳೆಸಿದ್ದಾರೆ.

ಶಿವಪ್ಪ ಕುಟುಂಬಕ್ಕೆ ಕೈತೋಟದ ಐಡಿಯಾ ಹೊಳೆದಿದ್ದು ಮೂರು ವರ್ಷದ ಹಿಂದೆ. ಆಗ ಕೃಷಿ ಇಲಾಖೆ ನೆರವಿನೊಂದಿಗೆ ಭೂಮಿ ಸುಸ್ಥಿರ ಅಭಿವೃದ್ಧಿ ಸಂಸ್ಥೆ ಸಾವಯವ ಗ್ರಾಮ ಯೋಜನೆಯನ್ನು ಯಡೇಹಳ್ಳಿಯಲ್ಲಿ ಅನುಷ್ಠಾನಗೊಳಿಸಲು ಸಿದ್ಧತೆ ನಡೆಸಿತ್ತು. ಪ್ರಾಥಮಿಕವಾಗಿ ಶಿವಪ್ಪನವರಂತಹ ಫಲಾನುಭವಿಗಳಿಗೆ ಹಸಿರೆಲೆ ಗೊಬ್ಬರ, ಎರೆಗೊಬ್ಬರ ಘಟಕ ನಿರ್ಮಾಣದ ತರಬೇತಿ ನೀಡಿತು. ಘಟಕಗಳ ಸ್ಥಾಪನೆಗೆ ಆರ್ಥಿಕ ಸಹಾಯ, ತರಬೇತಿ, ಅಗತ್ಯ ತಂತ್ರಜ್ಞಾನವನ್ನೂ ನೀಡಿತು. ಜೊತೆಗೆ ಮಲೆನಾಡಿನ ಕೈತೋಟ ಸಂಸ್ಕೃತಿ ಪುನರುಜ್ಜೀವನಗೊಳಿಸಿ ಹೊರಗಿನ ತರಕಾರಿ ಅವಲಂಬನೆ ತಪ್ಪಿಸುವುದಕ್ಕಾಗಿ ಮೂವತ್ತಕ್ಕೂ ಅಧಿಕ ಸ್ಥಳೀಯ ತರಕಾರಿ ಬೀಜಗಳನ್ನು ವಿತರಿಸಿತು. ಸ್ಥಳ ಉಳ್ಳವರು ಮನೆಯ ಅಂಗಳದಲ್ಲಿ ವ್ಯವಸ್ಥಿತ ಕೈತೋಟ ನಿರ್ಮಿಸಿಕೊಂಡರು. ಶಿವಪ್ಪ ಅವರಿಗೆ ಜಾಗದ ಕೊರತೆ. ಅವರಿಗೆ ನೆನಪಾದದ್ದು ಎರೆಗೊಬ್ಬರದ ತೊಟ್ಟಿಯ ಸುತ್ತವಿರುವ ಖಾಲಿ ಸ್ಥಳ.

ಎರಡನೇ ಯೋಚನೆ ಮಾಡದೇ ಗೊಬ್ಬರದ ಗುಂಡಿಯ ಸುತ್ತ ಸಂಸ್ಥೆಯವರು ಕೊಟ್ಟ ಬದನೆ, ಟೊಮ್ಯಾಟೋ, ಹಸಿಮೆಣಸಿನಕಾಯಿ, ಸೊಪ್ಪು, ಬಸಳೆ, ಬಳ್ಳಿ ಬೀನ್ಸ್ ಹೀಗೆ ತರಹೇವಾರಿ ತರಕಾರಿ ಬೀಜಗಳನ್ನು ಊರಿದರು(ನಾಟಿ ಮಾಡಿದರು). ಮೂರು ತಿಂಗಳು ಕಳೆಯುವುದರಲ್ಲಿ ಅತ್ತ ಗುಂಡಿಯಲ್ಲಿ ಗೊಬ್ಬರ ಸಿದ್ಧ ಆಯ್ತು. ಇತ್ತ ಸುತ್ತಲೂ ನಾಟಿ ಮಾಡಿದ್ದ ತರಕಾರಿಗಳು ಕಾಯಿ ಬಿಡಲಾರಂಭಿಸಿದರು !

ನಾವು ತರಕಾರಿಗೇ ಅಂತ ಪ್ರತ್ಯೇಕವಾಗಿ ಗೊಬ್ಬರ ಕೊಟ್ಟಿಲ್ಲ. ನೀರು ಕೊಟ್ಟಿಲ್ಲ. ಗೊಬ್ಬರ ಕೈಯಾಡುವಾಗ, ನೀರು ಚಿಮುಕಿಸುವಾಗಷ್ಟೇ ತರಕಾರಿ ಗಿಡಗಳಿಗೂ ಹಾಕಿದ್ದೇವೆ. ರೋಗ, ಕೀಟ ಅಂತ ಗಮನಿಸಿಲ್ಲ ಎನ್ನುವ ಶಿವಪ್ಪನವರು ಪ್ರತಿ ವಾರ ಪೇಟೆಗೆ ಹೋಗಿ ತರಕಾರಿ ತರುವುದು ತಪ್ಪಿತು. ಪ್ರತಿ ನಿತ್ಯ ತಾಜಾ ತರಕಾರಿ ಲಭ್ಯವಾಯಿತು. 150 ರೂಪಾಯಿ ದುಡ್ಡು ಉಳಿಯಿತು ಎಂದು ಲೆಕ್ಕಚಾರ ಕೊಡುತ್ತಾರೆ.

ಶಿವಪ್ಪ ಅವರ ಶಾಶ್ವತ ಎರೆಗೊಬ್ಬರದ ಗುಂಡಿಯ ಸುತ್ತಾ ಈಗ ಕಾಯಂ ತರಕಾರಿ ತೋಟ ನಿರ್ಮಾಣವಾಗಿದೆ. ವರ್ಷಪೂರ್ತಿ ಒಂದಲ್ಲ ಒಂದು ತರಕಾರಿ ಲಭ್ಯವಾಗುತ್ತಿದೆ.

**ಸಂಪಾದಕರು : ಜಯಪ್ರಸಾದ್ ಬಳ್ಳೇಕೆರೆ**

# ಕೈತೋಟದಿಂದ ಸ್ವಾವಲಂಬಿಯಾದ ಖಲೀಲ್:

**ಕೈತೋಟದಿಂದ ಸ್ವಾವಲಂಬಿಯಾದ ಖಲೀಲ್**

ಜಮೀನಿದ್ದರೂ ತರಕಾರಿ ಕೊಳ್ಳುವ ಪರಿ ಈಗಿನ ರೈತರದ್ದು. ರೈತರಾಗಿಯೂ ತರಕಾರಿ ಕೊಳ್ಳುವುದು ನಿಜಕ್ಕೂ ಅವಮಾನ ಎಂದು ಭಾವಿಸಿದ ಫಲ್ಗುಣಿಯ ರೈತ ಖಲೀಲ್ ಒಂದೂವರೆ ವರ್ಷದಲ್ಲಿ ತಮ್ಮ ಮನೆಯ ಸುತ್ತ ಹತ್ತಾರು ತರಹದ ತರಕಾರಿ ಬೆಳೆದು ಸ್ವಾವಲಂಬಿಯಾಗಿದ್ದಾರೆ. ಆಗಸ್ಟ್ 22ನ್ನು ವಿಶ್ವ ಕೈತೋಟ ದಿನವನ್ನಾಗಿ ಆಚರಿಸುವ ಈ ಸಂದರ್ಭದಲ್ಲಿ ಖಲೀಲ್ ರಂತ ರೈತರು ಹಲವರಿಗಾದರೂ ಮಾದರಿಯಾಗಲಿ.

ಸಾರ್, ಎರಡೂವರೆ ವರ್ಷದ ಹಿಂದೆ ನಾವು ತರಕಾರಿಗಾಗಿ ಬಹಳ ಕಷ್ಟ ಪಡುತ್ತಿದ್ದವು. ಅಷ್ಟೇ ಅಲ್ಲ,  ಒಂದು ವಾರಕ್ಕೆ ಕನಿಷ್ಠ ಅಂದ್ರೂ 100 ರೂ. ತರಕಾರಿಗೆ ತೆಗೆದಿಡಬೇಕಿತ್ತು. ಈಗ ಹಾಗಿಲ್ಲ. ನಮ್ಮ ಮನೆ ಸುತ್ತಲೂ ಸಾವಿರಾರು ರೂಪಾಯಿಯನ್ನು ವರ್ಷಪೂರ್ತಿ ತರಕಾರಿ ಬೆಳೆಯುತ್ತಿದ್ದೇವೆ. ಕಳೆದ ಆರು ತಿಂಗಳಿಂದ ನನ್ನ ಆದಾಯದಲ್ಲಿ ಕಾಲು ಭಾಗ ತರಕಾರಿಯಿಂದ ಬಂದಿದೆ

-ಬಹಳ ಹೆಮ್ಮೆಯಿಂದ ಈ ಮಾತನ್ನು ಉದ್ಧರಿಸುವಾಗ ಕಲೀಲ್ ಹಾಗೂ ಪತ್ನಿ ಸುರೆಯಬಾನು ಮುಖದಲ್ಲಿ ಸಣ್ಣದೊಂದು ಮಂದಹಾಸ, ಸಮಾಧಾನ, ಗೆಲುವಿನ ಗೆರೆ. ಆದರೆ ಹತ್ತು ವರ್ಷದ ಹಿಂದೆ ಈ ಕುಟುಂಬ ತರಕಾರಿಗಾಗಿ ಪರದಾಡುತ್ತಿದ್ದ ಕಥೆ ಕೇಳಿದರೆ ಇವತ್ತಿನ ಬೆಳವಣಿಗೆ ನಿಜಕ್ಕೂ ಅಚ್ಚರಿ ಮೂಡಿಸುತ್ತದೆ.

**ಹತ್ತು ವರ್ಷಗಳ ಹಿಂದೆ**

ಕಲೀಲ್, ಮೂಡಿಗೆರೆ ತಾಲ್ಲೂಕಿನ ಫಲ್ಗುಣಿಯ ಸಣ್ಣ ರೈತ. ಮೂವರು ಸದಸ್ಯರ ಇವರ ಕುಟುಂಬದ ಹಸಿವು ನೀಗಿಸುತ್ತಿರುವುದು ಕೇವಲ ಒಂದೂವರೆ ಎಕರೆ ಜಮೀನು. ಇಷ್ಟು ಪುಟ್ಟ ವಿಸ್ತೀರ್ಣದ ಜಮೀನಿನಲ್ಲಿ ವೈವಿಧ್ಯಮಯ ಬೆಳೆ ಬೆಳೆದಿದ್ದಾರೆ. ಇವರ ಜಮೀನಿನಲ್ಲಿ ಕಾಫಿ, ಮೆಣಸು, ಭತ್ತ ಬಾಳೆ, ಅಡಿಕೆ, ತೆಂಗು ಜೊತೆಗೆ ಅಲ್ಲಲ್ಲಿ ಬಳ್ಳಿ ತರಕಾರಿಗಳಿವೆ.

ಇದರ ಜೊತೆಗೆ ಹೆಚ್ಚುವರಿ ಆದಾಯಕ್ಕಾಗಿ ನೆರೆಹೊರೆಯವರಿಂದ ಜಮೀನನ್ನು ಗುತ್ತಿಗೆ (ಗೇಣಿ) ಪಡೆದು ಭತ್ತದ ಕೃಷಿ ಮಾಡುತ್ತಾರೆ. ಒಂದು ಎಕರೆಗೆ ಕನಿಷ್ಠ 15ರಿಂದ 20 ಚೀಲ ಭತ್ತ ಬೆಳೆದರೆ, ಆರು ಪಲ್ಲದಷ್ಟು ಭತ್ತವನ್ನು ಗುತ್ತಿಗೆ ಕೊಟ್ಟ ಮಾಲೀಕರಿಗೆ ಹಿಂದಿರಿಗಿಸುತ್ತಾರೆ.

ಇಷ್ಟೆಲ್ಲ ಕೃಷಿ ವೈವಿಧ್ಯದ ಬದುಕಾಗಿದ್ದರೂ ಕಳೆದ ಹತ್ತು ವರ್ಷಗಳಿಂದ ಈ ಕುಟುಂಬ ತರಕಾರಿಗಾಗಿ ದೂರದ ಪಟ್ಟಣವನ್ನೇ ಆಶ್ರಯಿಸಬೇಕಿತ್ತು. ದುಡಿದ ಹಣದಲ್ಲಿ ಒಂದು ವಾರಕ್ಕೆ ಕನಿಷ್ಠ 100 ರೂಪಾಯಿಯಷ್ಟು ಹಣವನ್ನು ತರಕಾರಿಗೆ ಖರ್ಚು ಮಾಡುತ್ತಿತ್ತು. ಇಷ್ಟು ಖರ್ಚು ಮಾಡಿದರೂ ತಾಜಾ ಹಾಗೂ ಪೌಷ್ಟಿಕ ತರಕಾರಿ ಮಾತ್ರ ಲಭ್ಯವಾಗುತ್ತಿರಲಿಲ್ಲ.

ಬಹಳ ಹಿಂದೆ ಇದೇ ಖಲೀಲ್ ಕುಟುಂಬದವರು ಗೆಡ್ಡೆ ಕೋಸು, ಸೊಪ್ಪು, ತೊಂಡೆಯಂತ ತರಕಾರಿಗಳನ್ನು ಬೆಳೆಯುತ್ತಿದ್ದರು. ದುಬಾರಿ ಒಳಸುರಿ, ಸಮರ್ಪಕ ಮಾರುಕಟ್ಟೆ ಕೊರತೆ ಜೊತೆಗೆ ಬೇಸಿಗೆಯಲ್ಲಿ ಅತಿಯಾದ ನೀರಿನ ತಾಪತ್ರಯದಿಂದಾಗಿ ತರಕಾರಿ ಕೃಷಿಯನ್ನು

ನಿಲ್ಲಿಸಿಬಿಟ್ಟಿದ್ದರು. ಹಾಗಾಗಿ ತರಕಾರಿಯನ್ನು ಹಣಕೊಟ್ಟು ಕೊಳ್ಳುತ್ತಿದ್ದರು ಒಬ್ಬ ರೈತನಾಗಿ, ಇಷ್ಟು ಜಮೀನಿದ್ದೂ ತರಕಾರಿ ಕೊಳ್ಳಬೇಕಲ್ಲ ಎಂಬ ನೋವು ಖಲೀಲ್ ಕುಟುಂಬಕ್ಕಿತ್ತು.

**ಈಗ ಏನಾಗಿದೆ?**

ಹೀಗಿದ್ದಾಗ, ಎರಡೂವರೆ ವರ್ಷಗಳ ಹಿಂದೆ ಭೂಮಿ ಸುಸ್ಥಿರ ಅಭಿವೃದ್ಧಿ ಸಂಸ್ಥೆ ಫಲ್ಗುಣಿ ಸುತ್ತ ಮುತ್ತ ಕೃಷಿ ಇಲಾಖೆಯ ಸಹಯೋಗದಲ್ಲಿ ಸಾವಯವ ಗ್ರಾಮ ಯೋಜನೆಯನ್ನು ಅನುಷ್ಠಾನಗೊಳಿಸಲು ಮುಂದಾಯಿತು. ಈ ಯೋಜನೆಯಡಿ ಪ್ರತಿಯೊಬ್ಬ ಫಲಾನುಭವಿಗೂ ಅವರ ಅಂದದ ಮನೆಗೊಂದು ಚಂದದ ಕೈತೋಟ ನಿರ್ಮಿಸಲು ಪ್ರೇರೇಪಿಸಿತು. ನಂತರ ಉಚಿತವಾಗಿ ತರಕಾರಿ ನಾಟಿ ಬೀಜ ವಿತರಿಸಿತು. ಪ್ರತಿಯೊಬ್ಬರಿಗೂ ಎರೆಗೊಬ್ಬರ ತಯಾರಿಕೆ, ಹಸಿರೆಲೆ ಗೊಬ್ಬರ ಉತ್ಪಾದನೆ ಕುರಿತು ತರಬೇತಿ ನೀಡಿತು. ಕೃಷಿ ಪ್ರವಾಸ, ಹಲವು ತರಬೇತಿಗಳ ಮೂಲಕ ಕೈತೋಟದ ಬಗ್ಗೆ ಮಾಹಿತಿ ನೀಡಿತು.

ವಿಶ್ವ ಕೈತೋಟ ದಿನಾಚರಣೆಯ ಸಂದರ್ಭದಲ್ಲಿ ಇಡೀ ಊರಿನಲ್ಲೇ ಕೈತೋಟದ ಜಾಥ ಏರ್ಪಡಿಸಿತು. ಈ ಎಲ್ಲ ಯೋಜನೆ ಲಾಭವನ್ನು ಹೆಚ್ಚಾಗಿ ಪಡೆದ ಖಲೀಲ್ ಕುಟುಂಬ ಭೂಮಿ ಸಂಸ್ಥೆ ಕೊಟ್ಟ ನಾಟಿ ತರಕಾರಿ ಬೀಜಗಳನ್ನು ತಮ್ಮ ಮನೆಯ ಅಂಗಳದಲ್ಲಿ ಬಿತ್ತಿದರು. ಯೋಜನೆಯಡಿ ನಿರ್ಮಿಸಿದ ಎರೆಹುಳು ಗೊಬ್ಬರದ ಘಟಕದಿಂದಲೇ ಗೊಬ್ಬರ ಬಳಸುತ್ತಿದ್ದರಿಂದ ಒಳಸುರಿ ಖರ್ಚು ಶೂನ್ಯವಾಯಿತು.

ಈಗ ಯೋಜನೆ ಆರಂಭವಾಗಿ ಎರಡು ವರ್ಷಗಳಾಗಿವೆ. ಕಲೀಲ್ ಮನೆಯ ಅಂಗಳದಲ್ಲಿ ವೈವಿಧ್ಯಮಯ ನಾಟಿ ತರಕಾರಿಗಳು ಮೇಳೈಸಿವೆ. ತೊಂಡೆ, ಮೆಣಸು, ಅವರೆ, ಚಪ್ಪರದ ಅವರೆ, ಅಲಸಂದೆ, ಹೀರೇಕಾಯಿ, ಅರಿವೆ ಸೊಪ್ಪು, ಬೀನ್ಸ್, ಹಾಲು ಸೋರೆ, ಕುಂಬಳಕಾಯಿ, ಅನಾನಸ್, ಶುಂಠಿ ಹಾಗೂ ಪರಂಗಿ (ಪಪ್ಪಾಯ) ಗಿಡಗಳು ಭರಪೂರ ಫಲ ನೀಡುತ್ತಿವೆ.

ಕಳೆದ ಒಂದು ವರ್ಷದಲ್ಲಿ 100 ಹಾಲು ಸೋರೆ ಬೆಳೆದು, 1000 ರೂಪಾಯಿ ಗಳಿಸಿದ್ದಾರೆ ಖಲೀಲ್. ಇದರ ಜೊತೆಗೆ ಹತ್ತು ಕುಂಬಳ, 30 ಕೆಜಿ ಗೆಣಸು, 200 ಪಪ್ಪಾಯಿ, 30 ಕೆಜಿ ತೊಂಡೆ, 50 ಕೆಜಿ ಬದನೆಕಾಯಿ(ಮೊಳಬದನೆ), 20 ಕೆಜಿ ಅವರೆಕಾಯಿ, 20 ಕೆಜಿ ಚಪ್ಪರದ ಅವರೆ, 5 ಕೆ.ಜಿ ಅಲಸಂದೆ, 1 ಕೆ.ಜಿ ಹೀರೇಕಾಯಿ, 25 ಕೆ.ಜಿ ಬೀನ್ಸ್... ಹೀಗೆ ತಾವು ಮಾರಾಟ ಮಾಡಿದ ತರಕಾರಿಯ ಪಟ್ಟಿಯನ್ನು ಅವರು ಬಿಚ್ಚಿಡುತ್ತಾರೆ. ಇವುಗಳ ಜೊತೆಗೆ ಬೆಳೆಯುವ ಸೊಪ್ಪು ಹಾಗೂ ಬಳ್ಳಿ ತರಕಾರಿಗಳ ಮಾರಾಟ ಲೆಕ್ಕಕ್ಕೇ ಸಿಗೋದಿಲ್ಲ. ನಾವು ಬೆಳೆದಿದ್ದೆಲ್ಲವನ್ನೂ ಮಾರುವುದಿಲ್ಲ. ಮೊದಲು ನಮಗೆ ಸಾಕಾಗುವಷ್ಟು ಇಟ್ಟುಕೊಂಡು, ಉಳಿದದ್ದನ್ನು ಮಾರಾಟ ಮಾಡುತ್ತೇವೆ ಎನ್ನುತ್ತಾರೆ ಖಲೀಲ್.

**ಅಪ್ಪಟ ಸಾವಯವ ಕೈತೋಟ**

ಮೊದಲು ರಾಸಾಯನಿಕ ಗೊಬ್ಬರ, ಹೈಬ್ರಿಡ್ ಬೀಜಕ್ಕೆ ಸಿಕ್ಕಾಪಟ್ಟೆ ದುಡ್ಡು ಸುರಿತಿದ್ವಿ. ಅದೆಷ್ಟು ಗೊಬ್ಬರ ಹಾಕಿದ್ರೂ ಸಾಕಾಗ್ತಿರಲಿಲ್ಲ. ಜೊತೆಗೆ ತರಕಾರಿಗಳಿಗೆ ತುಂಬಾ ರೋಗ-ಕೀಟ ಬಾಧೆಯಿತ್ತು. ಈಗ ರಾಸಾಯನಿಕ ಗೊಬ್ಬರ ಹಾಕೋದಿಲ್ಲ. ನಮ್ಮ ಮನೆಯಲ್ಲೇ ವರ್ಷಕ್ಕೆ ಒಂದು ಟನ್ ಎರೆಹುಳು ಗೊಬ್ಬರ ಸಿಗುತ್ತದೆ. ಆಕಳು ಗೊಬ್ಬರವೂ ಇದೆ. ಇವೆರಡನ್ನೇ ಬಳಸಿ ತರಕಾರಿ ಬೆಳೆಯುತ್ತಿದ್ದೇನೆ. ನೀವು ನಂಬೋದಿಲ್ಲ, ನಮ್ಮ ತರಕಾರಿ ಬೆಳೆಗೆ ರೋಗ ಬಹಳ ಕಡಿಮೆ. ನಿಮಗೆ ಗೊತ್ತಾ, ನಮ್ಮದು ಅಪ್ಪಟ ಸಾವಯವ ಕೈತೋಟ ಎಂದು ಖಲೀಲ್ ತಮ್ಮ ಹಿಂದಿನ ದಿನಗಳಿಗೂ, ಇವತ್ತಿನ ಪರಿಸ್ಥಿತಿಯನ್ನೂ ಹೋಲಿಸಿ ಮಾತನಾಡುತ್ತಾರೆ.

ಖಲೀಲ್ ಪ್ರಕಾರ ಒಳಸುರಿ ಕಡಿಮೆ ಮಾಡಿ, ಸಾವಯವ ಪದ್ಧತಿಯಲ್ಲಿ ತರಕಾರಿ ಬೆಳೆದರೆ ಬಂದಿದ್ದೆಲ್ಲವೂ ಲಾಭ. ಜೊತೆಗೆ ವೈವಿಧ್ಯಮಯ ತರಕಾರಿ ಬೆಳೆಯುವುದರಿಂದ ಕೀಟ-ರೋಗ ಬಾಧೆ ಕಡಿಮೆ. ಒಳಸುರಿ ಕಡಿತವಾದರೆ ಆದಾಯ ಹೆಚ್ಚಾಗುತ್ತದೆ. ಸಾವಯವ ಗೊಬ್ಬರಗಳನ್ನು ಬಳಸಿದರೆ ಪೌಷ್ಟಿಕ ತರಕಾರಿಗಳು ಲಭ್ಯವಾಗುತ್ತವೆ, ಆರೋಗ್ಯವೂ ಸುಧಾರಿಸುತ್ತದೆ. ಇಂಥ ಸಣ್ಣ ಸಣ್ಣ

ತಂತ್ರಗಳನ್ನು ಕಲಿಸಿದ್ದು, ಲಾಭಗಳ ಬಗ್ಗೆ ಯೋಚಿಸುವಂತೆ ಮಾಡಿದ್ದು ಭೂಮಿ ಸಂಸ್ಥೆ. ಅವರು ಆರಂಭದಲ್ಲಿ ಆಯೋಜಿಸಿದ್ದ ಕೈತೋಟ ತರಬೇತಿ ಕಾರ್ಯಕ್ರಮದಿಂದ ಇಷ್ಟೆಲ್ಲ ಕಲಿತೆವು ಎಂದು ಕೈತೋಟದ ಪಾಠವನ್ನು ಅವರು ನೆನಪಿಸಿಕೊಳ್ಳುತ್ತಾರೆ.

ಖಲೀಲ್ ಕುಟುಂಬ ಈಗ ತರಕಾರಿ ಕೃಷಿಯಲ್ಲಿ ಸ್ವಾವಲಂಬಿ. ರಸ್ತೆ ಬದಿಯಲ್ಲೇ ಇವರ ತೋಟವಿರುವುದರಿಂದ ಅಲ್ಲಿ ಬೆಳೆದಿರುವ ತರಕಾರಿಗಳು ಹಾದಿಯಲ್ಲಿ ಹೋಗುವ ಗ್ರಾಹಕರನ್ನು ತನ್ನತ್ತ ಆಕರ್ಷಿಸುತ್ತವೆ. ತಾಜಾ ತರಕಾರಿ ಸಿಕ್ಕರೆ ಯಾರಾದರೂ ಬಿಟ್ಟಾರುಂಟೇ. ಪಟ್ಟಣಕ್ಕೆ ಹೋಗಿ ಬರುವವರೆಲ್ಲ ಇವರ ತೋಟದ ತರಕಾರಿಯನ್ನು ಕೊಂಡುಹೋಗುತ್ತಾರೆ. ಇದರಿಂದ ಖಲೀಲ್ ಮನೆ ಅಂಗಳಕ್ಕೆ ತರಕಾರಿ ಮಾರುಕಟ್ಟೆ ಬಂದು ನಿಂತಿದೆ.

**ತಾಜಾ ತರಕಾರಿ, ಆರೋಗ್ಯಕ್ಕೆ ರಹದಾರಿ**

ಅಷ್ಟೇ ಅಲ್ಲ, ಮನೆ ಮುಂದಿನ ತಾಜಾ ತರಕಾರಿ ಇವರ ಕುಟುಂಬದ ಆರೋಗ್ಯವನ್ನೂ ಹೆಚ್ಚಿಸಿದೆ. ಕುಟುಂಬದ ಆರ್ಥಿಕ ಬಲವನ್ನು ಹೆಚ್ಚಿಸಿದೆ. ಸೆಪ್ಟೆಂಬರ್‌ನಿಂದ ಜೂನ್‌ವರೆಗೂ ಇವರ ತರಕಾರಿ ಅಭಿಯಾನ ನಿರಂತರ. ಮಳೆ ಸುರಿಯೋದಕ್ಕೆ ಆರಂಭವಾದ ಮೇಲೆ ತರಕಾರಿ ಅಂಗಳಕ್ಕೆ ಸ್ವಲ್ಪ ವಿಶ್ರಾಂತಿ. ಆಗ ಇವರಿಗೆ ಆಧಾರವಾಗುವುದು ಎಂಥಾ ಮಳೆಗೂ ಜಗ್ಗದ ಬಳ್ಳಿ ತರಕಾರಿಗಳು. ಮಲೆನಾಡಿನಲ್ಲಿ ವರ್ಷಕ್ಕೆ ಆರು ತಿಂಗಳು ತರಕಾರಿ ಸಿಕ್ಕರೆ ಸಾಕು. ಉಳಿದ ನಾಲ್ಕೈದು ತಿಂಗಳು ಹೇಗೊ ಬದುಕು ತಳ್ಳಬಹುದು ಎನ್ನುವುದು ಖಲೀಲ್ ಅನುಭವದ ಮಾತು.

**ಆತಂಕದ ನಡುವೆಯೂ.... !**

ಖಲೀಲ್ – ಸುರಯಬಾನು ಅವರದ್ದು ಮೂರೂವರೆ ಎಕರೆ ಜಮೀನು. ಸಾವಯವದಲ್ಲಿ ಕೈತೋಟ ಬೆಳೆಸುವ ಜೊತೆಗೆ ಕಾಫಿ-ಮೆಣಸನ್ನು ಮಿಶ್ರ ಕೃಷಿಯಾಗಿ ಬೆಳೆದಿದ್ದಾರೆ. ಸ್ವಲ್ಪ ಗದ್ದೆ ಇದೆ. ಅದರಲ್ಲಿ ದೇಸಿ ಭತ್ತದ ತಳಿ ಬೆಳೆಯುತ್ತಾರೆ. ಇಷ್ಟೆಲ್ಲ ಕೃಷಿ ಚಟುವಟಿಕೆಗಾಗಿ ಟನ್ನುಗಟ್ಟಲೆ ಎರೆಗೊಬ್ಬರ ತಯಾರಿಸುತ್ತಾರೆ. ಕಾಳುಮೆಣಸಿನ ತೋಟಗಳನ್ನು ಗುತ್ತಿಗೆ ಪಡೆಯುತ್ತಾರೆ. ಇಷ್ಟೆಲ್ಲ ಕೃಷಿ ಚಟುವಟಿಕೆಯಲ್ಲಿ ತೊಡಗಿಕೊಂಡಿರುವ ಖಲೀಲ್ ಕುಟುಂಬಕ್ಕೆ ರಸ್ತೆ ವಿಸ್ತರಣೆ ಆತಂಕವಿದೆ. ರಸ್ತೆ ವಿಸ್ತರಣೆಯಾದರೆ ಅರ್ಧಕ್ಕರ್ಧ ಜಮೀನು ಹೊರಟು ಹೋಗುತ್ತದೆ. ಇಂಥ ಆತಂಕದ ನಡುವೆಯೂ ಚಿಂತೆ ಮಾಡದೇ ಕೃಷಿ ಚಟುವಟಿಕೆ ಮುಂದುವರಿಸಿದ್ದಾರೆ.

ಸಂಪಾದಕರು : ರವಿ ಮೂಡಿಗೆರೆ

# ಸೀಮೆ : ಗೊಬ್ಬರದ ಅಬ್ಬರವಿಲ್ಲದ ಜಿನ್ನೈನ್

ಸೀಮೆ

ಗೊಬ್ಬರದ ಅಬ್ಬರವಿಲ್ಲದ ಜಿನ್ನೈನ್

ವೈಸಿಆರ್ ಹೆಸರಿನಿಂದಲೇ ಗುರುತಿಸಿಕೊಳ್ಳುವ ವೈ.ಸಿ.ರುದ್ರಪ್ಪನವರು ಸಾವಯವ ಕೃಷಿಯನ್ನು ತಮ್ಮ ಮನೆಯ ಅಂಗಳದಿಂದಲೇ ಆರಂಭಿಸಿದ್ದಾರೆ. ಮೂರು ವರ್ಷಗಳಲ್ಲಿ ನೂರಾರು ಟನ್ ಸಾವಯವ ಗೊಬ್ಬರ ಉತ್ಪಾದಿಸುವ ಜೊತೆಗೆ ಬಾಳೆ, ಕಾಫಿ, ಮೆಣಸು ಎಲ್ಲವನ್ನೂ ಸಾವಯವ ಪದ್ಧತಿಯಲ್ಲಿ ಬೆಳೆಯುವ ಸಂಕಲ್ಪ ಮಾಡಿದ್ದಾರೆ. ಅದರ ಮೊದಲ ಪ್ರಯತ್ನವೇ ಜಿನ್ನೈನ್ ಬಾಳೆ ಬೆಳೆಯವ ಯಶಸ್ವೀ ಪ್ರಯೋಗ

ಸೀಮೆಗೊಬ್ಬರ (ರಾಸಾಯನಿಕ) ರಹಿತವಾಗಿ ಬಾಳೆ ಬೆಳೆಯಲು  ಯಾಕೆ ಸಾಧ್ಯವಾಗುತ್ತಿಲ್ಲ - ನೋಡ್ಬೇಕು ಎಂಬ ಹಠವಿತ್ತು. ಬೆಳೆದು ನಿಂತ ಬಾಳೆ, ಗೊನೆಯನ್ನು ಕಂಡಾಗ ಸಾಧ್ಯ ಅಂತ ವಿಶ್ವಾಸ ಬಂತು - ಬಾಳೆ ಕೃಷಿಯ ಯಶದ ಖುಷಿಯಲ್ಲಿ ಮಾತಿಗೆಳೆಯುತ್ತಾರೆ ಸಕಲೇಶಪುರ ಸನಿಹದ ಯಡೆಹಳ್ಳಿಯ ಆರ್.ಭಾಗ್ಯವತಿ ರುದ್ರಪ್ಪ.

ಮನೆಗೆ ತಾಗಿಕೊಂಡೇ ಎರೆಗೊಬ್ಬರದ ತೊಟ್ಟಿ. ಅದರ ಸನಿಹ ಸ್ವಲ್ಪ ಇಳಿಜಾರಾದ ಭೂಮಿಯಲ್ಲಿ ನೂರು ಜಿ-9 ತಳಿಯ ಬಾಳೆ ನೆಟ್ಟು ಒಂದು ವರ್ಷವಾಯಿತು. ಆಳೆತ್ತರದ ಗೊನೆಗಳು ಇನ್ನೇನು ಕಟಾವ್ ಆಗಲಿದೆ!

ಗಿಡದಿಂದ ಗಿಡಕ್ಕೆ ಆರಡಿ ಅಂತರ. ಒಂದೂವರೆ ಅಡಿ ಆಳದ ಹೊಂಡ. ಎರಡಡಿ ಉದ್ದಗಲ. ಇದಕ್ಕೆ ಎರೆಗೊಬ್ಬರ ಹಾಕಿ ಗಿಡ ನಾಟಿ. ಹದಿನೈದು ದಿನಕ್ಕೊಮ್ಮೆ ಗೊನೆ ಬಿಡುವ ತನಕ ಸ್ಲರಿ ಮತ್ತು ಎರೆಗೊಬ್ಬರ ಉಣಿಕೆ. ಯಾವುದೇ ಸಿಂಪಡಣೆ ಮಾಡಿಲ್ಲ. ಮೂರ್ನಾಲ್ಕು ಗಿಡಗಳಿಗೆ ಕಟ್ಟೆ ರೋಗ ಬಂತು. ಅದನ್ನು ಸಮೂಲ ತೆಗೆದು ಪುನಃ ಗಿಡ ನೆಟ್ಟೆ ಎನ್ನುತ್ತಾರೆ ಭಾಗ್ಯವತಿ. ಎರೆಹುಳಗಳನ್ನು ಬಾಳೆ ಬುಡಕ್ಕೆ ಬಿಟ್ಟಿದ್ದಾರೆ. ಅಲ್ಲೂ ಕೂಡಾ ಎರೆಗೊಬ್ಬರದ ಕಾರ್ಖಾನೆ ಸ್ಥಷ್ಟಿಯಾಗಿವೆ!

ಬೇಸಿಗೆಯಲ್ಲಿ ನೀರಾವರಿ. ಮನೆಕೆಲಸವನ್ನು ಹೊಂದಿಸಿಕೊಂಡು ಬಾಳೆ ಕೆಲಸ. ನೀರು, ಸ್ಲರಿ, ಗೊಬ್ಬರ, ಒಣಗಿದ ಬಾಳೆಕೈಗಳನ್ನು ಕಡಿದು ಎರೆತೊಟ್ಟಿಗೆ ಸೇರಿಸುವುದು ಮುಂತಾದ ಕೆಲಸಕ್ಕೆ ಇವರಿಗೆ ಸಹಾಯಕರು ಬೇಡ. ದಿನಕ್ಕೆ ಒಂದು ಗಂಟೆ ಇವರ ಕೈ ಕೆಸರು! ಗಿಡ ನಾಟಿ ಮಾಡುವಾಗ ಮಾತ್ರ ಸಹಾಯಕರ ಅವಲಂಬನೆ.

ಬಾಳೆ ನೆಟ್ಟು ಒಂದು ವರ್ಷವಾಯಿತು. ಆರುವರೆ ತಿಂಗಳಲ್ಲೇ ಗೊನೆ ಬಿಟ್ಟಿದೆ. ಹದಿನೈದಡಿ ಎತ್ತರಕ್ಕೆ ಬೆಳೆದಿದೆ. ಗೊನೆಯ ಭಾರ ತಾಳಲು ಮರದ ಕವಲನ್ನು ಕೊಟ್ಟಿದ್ದಾರೆ. ಸೀಮೆ ಗೊಬ್ಬರ ಹಾಕಿದರೆ ಗಿಡ ಎತ್ತರಕ್ಕೆ ಬರುವುದಿಲ್ಲ. ಇದು ನೋಡಿ, ಎಷ್ಟು ಎತ್ತರ ಬೆಳೆದಿದೆ ಎನ್ನುವಾಗ ಅವರಿಗೆ ಖುಷಿ.

ಒಂದು ಗೊನೆ 35-45 ಕಿಲೋ ಭಾರ. ಗೊನೆಯೊಂದು ಏನಿಲ್ಲವೆಂದರೂ 350-400 ಗಳಿಸಿಕೊಡುತ್ತದೆ. ಕಿಲೋಗೆ 10-12 ರೂಪಾಯಿ. ಎಲ್ಲವೂ ಸ್ಥಳೀಯ ಮಾರಾಟ. ಬಂದು ಒಯ್ಯುವ ಗಿರಾಕಿಗಳು.

ರುದ್ರಪ್ಪನವರಿಗೆ ಐವತ್ತೆಕ್ರೆ ಕೃಷಿಭೂಮಿ. ಕಾಫಿ, ಭತ್ತ ಸಿಂಹಪಾಲು. ಹತ್ತು ವರ್ಷಗಳ ಹಿಂದೆ ನಾಲ್ಕೂವರೆ ಎಕ್ರೆಯಲ್ಲಿ ಸೀಮೆ ಗೊಬ್ಬರ ಬಳಸಿ ಬಾಳೆ ಬೆಳೆದ ಅನುಭವ. ಇವರು ಸಾಮಾಜಿಕ ಕಾರ್ಯಕರ್ತ. ಸ್ಥಳೀಯ ನಿಸರ್ಗ ಸಾವಯವ ಕೃಷಿಕರ ಸಂಘದ ಅಧ್ಯಕ್ಷ. ಗಂಡನ ಅನುಪಸ್ಥಿತಿಯಲ್ಲಿ ಭಾಗ್ಯವತಿಯವರ ಉಸ್ತುವಾರಿಕೆ.

ಅಂದಿನ ಬಾಳೆ ಕೃಷಿಯ ಕಷ್ಟ-ಸುಖದ ಅರಿವಿತ್ತು. ಗೊನೆಗಳನ್ನು ಒಯ್ಯಲು ಬರುವ ಲಾರಿಗಳ ಭರಾಟೆ ಇನ್ನೂ ಮನಸ್ಸಿಂದ ಮಾಸಿಲ್ಲ ಹಳೆ ಅನುಭವದ ಬುತ್ತಿ ತೆರೆಯುತ್ತಾರೆ ಭಾಗ್ಯವತಿಯವರು. ಅಂದಿನ ಅನುಭವವೇ ಸ್ವ-ಶ್ರಮದಿಂದ ಬಾಳೆ ಬೆಳೆಯಲು ಪ್ರೇರಣೆ.

ಕಳೆದ ಮೂರು ವರ್ಷಗಳಿಂದ ಭೂಮಿ ಸುಸ್ಥಿರ ಅಭಿವೃದ್ಧಿ ಸಂಸ್ಥೆಯು ಯಡೆಹಳ್ಳಿಯಲ್ಲಿ ಗ್ರಾಸ್‌ರೂಟ್ ಲಕ್ಷ್ಯವಿಟ್ಟು ಸಾವಯವ ಗೊಬ್ಬರ/ಕೃಷಿಯ ಅರಿವನ್ನು ಬಿತ್ತುತ್ತಿದೆ. ಅದರ ನೇರ ಫಲಶ್ರುತಿಯಲ್ಲೊಂದು ಬಾಳೆ ಕೃಷಿ. ಭಾಗ್ಯವತಿಯರಿಗೆ ಇವೆಲ್ಲಾ ಉಸಾಬರಿ ಇಲ್ಲದೆ ಹಾಯಾಗಿರಬಹುದಿತ್ತು. ಇವುಗಳ ಮಧ್ಯೆ ಸೀಮೆಗೊಬ್ಬರ ಇಲ್ಲದೆ ಬೆಳೆಯಬೇಕು ಎಂಬ ಛಲ ಮತ್ತು ಸ್ವ-ದುಡಿಮೆ - ಇದರಲ್ಲಿದೆ ಸಂದೇಶ.

***ಸಂಪಾದಕರು : ನಾ. ಕಾರಂತ ಪೆರಾಜೆ***

# ನಿವೃತ್ತ ಯೋಧನ ಸಾವಯವ ಗಾಥೆ

**ನಿವೃತ್ತ ಯೋಧನ ಸಾವಯವ ಗಾಥೆ**

**ಶುಂಠಿಯನ್ನು ವಿಷ ಹಾಕೇ ಬೆಳೆಯಬೇಕೆಂಬ ಯೋಚನೆ ಏಕೆ? ಎಂದು ಪ್ರಶ್ನಿಸುತ್ತಲೇ ಸಾವಯವ ಶುಂಠಿ ಬೆಳೆದು ತೋರಿಸಿದರು ಕಾಡುಗದ್ದೆಯ ಚಿದಂಬರ. ಶುಂಠಿಯ ಯಶಸ್ಸು ಅವರ ತೋಟವನ್ನು ಹಂತ ಹಂತವಾಗಿ ಸಾವಯವ ಕೃಷಿಗೆ ವಿಸ್ತರಿಸಿತು.**

ಸುರಿಯೋ ಮಳೆ ನೀರೆಲ್ಲಾ, ಇಲ್ಲೇ ನಿಲ್ಲುತ್ತದೆ. ಇನ್ನು ಕೃಷಿ ಹೇಗ್ರಿ ಮಾಡ್ತೀರಿ - ಕಾಡುಗದ್ದೆಗೆ ಬಂದವರೆಲ್ಲ ಕೃಷಿಕ ಚಿದಂಬರ ಅವರಿಗೆ ಇಂಥದ್ದೊಂದು ಅಚ್ಚರಿಯ ಪ್ರಶ್ನೆ ಕೇಳೇ ಕೇಳ್ತಾರೆ. ಅಷ್ಟು ತಗ್ಗಿನ ಪ್ರದೇಶದಲ್ಲಿದೆ ಅವರ ಜಮೀನು. ಒಮ್ಮೆ ಮಳೆ ಸುರಿದರೆ ಅಲ್ಲಿನ ಗದ್ದೆಗಳೆಲ್ಲ ಕೆರೆಗಳಾಗುತ್ತವೆ. ಬೆಳೆಗಳೆಲ್ಲ ನಾಶವಾಗುತ್ತವೆ. ಇಷ್ಟೆಲ್ಲ ಪ್ರಕೃತಿ ವಿಕೋಪಗಳನ್ನು ಎದುರಿಸುತ್ತಾ ಕಳೆದ ಮೂರು ವರ್ಷಗಳಿಂದ ಸಾವಯವ ಕೃಷಿ ಪದ್ಧತಿಯಲ್ಲಿ ಶುಂಠಿ, ಬಾಳೆ, ಭತ್ತ ಹಾಗೂ ವಿವಿಧ ಹಣ್ಣುಗಳನ್ನು ಬೆಳೆಯುತ್ತಿದ್ದಾರೆ ಚಿದಂಬರ.

ಸಕಲೇಶಪುರ- ಹಾಸನ ನಡುವೆ ಬಾಳ್ಳುಪೇಟೆ ಇದೆ. ಅದಾದ ನಂತರ ಕುಂಬಾರಘಟ್ಟೆ ಗೇಟು. ಗೇಟು ಹಾದು ಒಳ ಹೊಕ್ಕರೆ ಸಾಲು ಮನೆಗಳ ಯೆಡೇಹಳ್ಳಿ. ಈ ಹಳ್ಳಿಯೊಳಗಿನ ಕಿರಿದಾದಾ ಜಾಡು ಹಿಡಿದು ಇಳಿದರೆ ಅದೇ ಕಾಡುಗದ್ದೆ. ಚಿದಂಬರ ಅವರ ಕೃಷಿ ಕ್ಷೇತ್ರ.

ಚಿದಂಬರ ಅವರದ್ದು ಏಳು ಸದಸ್ಯರ ಅವಿಭಕ್ತ ಕುಟುಂಬ. ಜೀವನಕ್ಕಾಗಿ ಒಂಬತ್ತು ಎಕರೆ ಕೃಷಿ ಭೂಮಿ. ಅದರಲ್ಲಿ ನಾಲ್ಕು ಎಕರೆ ಗದ್ದೆ. ಐದು ಎಕರೆ ತೋಟ. ಗದ್ದೆಯಲ್ಲಿ ಆಹಾರ ಬೆಳೆ ಭತ್ತ. ವಾಣಿಜ್ಯ ಬೆಳೆ ಶುಂಠಿ ಇದೆ. ತೋಟದಲ್ಲಿ ಕಾಫಿ, ಕಾಳುಮೆಣಸು, ಬಾಳೆ, ಹಣ್ಣಿನ ಗಿಡಗಳು ಹಾಗೂ ಔಷಧಿ ಸಸ್ಯಗಳಿವೆ.

**ಕೃಷಿಗೆ ಏರಿದ್ದು.. ಹೀಗೆ ?**

ಒಟ್ಟು ಮೂರು ಜನ ಸಹೋದರರಲ್ಲಿ ಅಣ್ಣನಿಗೆ ಕೃಷಿ ಜವಾಬ್ದಾರಿ. ತಮ್ಮ ಬೆಂಗಳೂರಿನ ಖಾಸಗಿ ಕಂಪೆನಿಯಲ್ಲಿ ಉದ್ಯೋಗಿ. ಚಿದಂಬರ ಸೇನೆಯಲ್ಲಿ ಯೋಧರಾಗಿದ್ದರು. ನಾಲ್ಕೈದು ವರ್ಷಗಳ ಹಿಂದೆ ನಿವೃತ್ತಿಯಾಗಿ ಊರು ಸೇರಿದರು. ಉದ್ಯೋಗ ಹುಡುಕಬೇಕು ಎನ್ನುವಷ್ಟರಲ್ಲಿ ಹಿರಿಯ ಸಹೋದರ ತೀರಿಹೋದರು. ಕೃಷಿ ಕೆಲಸಗಳು ಚಿದಂಬರ ಅವರ ಹೆಗಲೇರಿತು. ಸೇನೆಯಲ್ಲಿ ಶಿಸ್ತಿನ ಜೀವನ ಕಂಡಿದ್ದ ಚಿದಂಬರ ಅವರಿಗೆ ಕೃಷಿ ಕ್ಷೇತ್ರದಲ್ಲೂ ಶಿಸ್ತಿನ ಬದುಕು ರೂಪಿಸುವ ಹಂಬಲ. ಅದಕ್ಕಾಗಿ ಹುಡುಕಾಟ ಆರಂಭ.

ಕಾಕತಾಳೀಯವೆಂಬಂತೆ ಸರ್ಕಾರದ ಸಾವಯವ ಗ್ರಾಮ ಯೋಜನೆ ಇವರ ಊರಿಗೆ ಪರಿಚಯವಾಯಿತು. ಭೂಮಿ ಸುಸ್ಥಿರ ಅಭಿವೃದ್ಧಿ ಸಂಸ್ಥೆ ಈ ಯೋಜನೆ ಅನುಷ್ಠಾನದ ನೇತೃತ್ವವ ಹಿಸಿತ್ತು. ಯೋಜನೆಯಡಿ ಸಾವಯವ ಕೃಷಿ ತರಬೇತಿ, ಅಧ್ಯಯನ ಪ್ರವಾಸ, ಹಲವಾರು ಉಪನ್ಯಾಸ, ಪ್ರಾತ್ಯಕ್ಷಿಕೆಗಳು, ಸಾವಯವ ಗೊಬ್ಬರ ತಯಾರಿಸುವ ತರಬೇತಿ ಇಂಥ ಹಲವು ಚಟುವಟಿಕೆಗಳು ಯೋಜನೆಯ ಫಲಾನುಭವಿಯಾದ ಚಿದಂಬರ ಅವರಲ್ಲಿ ನವ ಚೈತನ್ಯ ತುಂಬಿದವು. ಎಲ್ಲವನ್ನೂ ಅರಿತ ಚಿದಂಬರ ಸಾವಯವ ಕೃಷಿಯ ಪಯಣ ಆರಂಭಿಸಿದರು.

**ಗೊಬ್ಬರ ತಯಾರಿಕೆ ಮೊದಲ ಹೆಜ್ಜೆ:**

ಸಾವಯವ ಕೃಷಿಗೆ ಪೂರಕವಾದ ಗೊಬ್ಬರ ತಯಾರಿಕೆಗೆ ಸಿದ್ಧತೆ ನಡೆಸಿದರು ಚಿದಂಬರ. ಮೊದಲು ಚಿಗುರುವ ಕಡ್ಡಿ ಕಾಂಪೋಸ್ಟ್ ಘಟಕ ನಿರ್ಮಾಣ. ನಂತರ ತೊಟ್ಟಿ ಗೊಬ್ಬರ, ಎರೆಗೊಬ್ಬರ.. ಹೀಗೆ ಜಮೀನಿನ ಸುತ್ತಾ ಗೊಬ್ಬರ ಘಟಕಗಳು ಸಿದ್ಧವಾದವು.

ಗೋಬರ್ ಗ್ಯಾಸ್‌ನಿಂದ ಬರುವ ಸ್ಲರಿ, ಸುತ್ತಲೂ ಸಿಗುವ ಜೀವರಾಶಿ(ಬಯೋ ಮಾಸ್), ಆಕಳು ಸೆಗಣಿ.. ಗೊಬ್ಬರಕ್ಕೆ ಕಚ್ಚಾವಸ್ತುಗಳಾದವು. ಎತ್ತರದ ಜಾಗದಲ್ಲಿ ದ್ರವರೂಪಿ ಗೊಬ್ಬರಗಳ ತಯಾರಿಕೆಗಾಗಿ ಸಿಮೆಂಟ್ ತೊಟ್ಟಿ. ಪ್ರತಿವರ್ಷ ಕನಿಷ್ಟ 30-35 ಟನ್ ಗೊಬ್ಬರ ಉತ್ಪಾದನೆ.

ಗೊಬ್ಬರ ತಯಾರಿಕೆ ಶುರುಮಾಡಿದ ಮೇಲೆ ಅರ್ಧಕ್ಕರ್ಧ ರಸಗೊಬ್ಬರಕ್ಕೆ ಗುಡ್ ಬೈ ಹೇಳಿದೆ, ಈ ಬಾರಿ ಒಂದಷ್ಟು ಹಣ ಉಳಿತಾಯವಾಯಿತು ಎನ್ನುತ್ತಾರೆ ಚಿದಂಬರ.

**ಸಾವಯವ ಶುಂಠಿ ಕೃಷಿ – ಪೈಲಟ್ ಯೋಜನೆ :**

ಸಾವಯವಕ್ಕೆ ಪರಿವರ್ತನೆಗೊಳ್ಳುವ ಮುನ್ನ ಪೈಲಟ್ ಯೋಜನೆ ರೂಪದಲ್ಲಿ ಮೊದಲು 5 ಗುಂಟೆಯಲ್ಲಿ ಸಾವಯವ ಶುಂಠಿ ಬೆಳೆಸಲು ಮುಂದಾದರು. ಐದು ಎಕರೆ ತೋಟದಲ್ಲಿ 30 ಗುಂಟೆಯನ್ನು ಸಾವಯವಕ್ಕೆ ಪರಿವರ್ತಿಸುವ ಸಂಕಲ್ಪ ಮಾಡಿದರು.

ಮಾಮೂಲಿಯಾಗಿ 10 ಅಡಿ ಉದ್ದ 3 ಅಡಿ ಅಗಲದ ಏರುಮಡಿಗಳನ್ನು ನಿರ್ಮಿಸಿ 1 ಟನ್ ಕೊಟ್ಟಿಗೆ ಗೊಬ್ಬರ ಮತ್ತು 50 ಕಿಲೋ ಬೇವಿನ ಹಿಂಡಿಯನ್ನು ಏರುಮಡಿಗಳ ಮೇಲೆ ಚೆಲ್ಲಿ, ಮಣ್ಣಿನಲ್ಲಿ ಮಿಶ್ರ ಮಾಡಿದರು. ಹೀಗೆ ಸಿದ್ಧವಾದ ಮಡಿಗಳಿಗೆ 3/4*1 ಅಡಿ ಅಂತರದಲ್ಲಿ 30 ಶುಂಠಿ ಬೀಜಗಳನ್ನು ಊರಿದರು. ಈ ವಿಧಾನದಲ್ಲಿ ಬಿತ್ತಿದರೆ 5 ಗುಂಟೆಗೆ 60 ಕೆಜಿಯ 1/2 ಚೀಲ ಶುಂಠಿ ಬೀಜ ಬೇಕಾಗುತ್ತದೆ ಎನ್ನುವುದು ಚಿದಂಬರ ಅವರ ಲೆಕ್ಕಾಚಾರ.

ಬಿತ್ತನೆಗೆ ಮುನ್ನ 5 ಲೀಟರ್ ಗಂಜಲ, 1/2 ಲೀಟರ್ ಬೇವಿನೆಣ್ಣೆಯನ್ನು 100 ಲೀ ನೀರಿನೊಂದಿಗೆ ಬೆರೆಸಿ ಈ ಮಿಶ್ರಣದಲ್ಲಿ ಶುಂಠಿ ಬೀಜಕ್ಕೆ ಉಪಚಾರ. ಬೀಜಗಳಿಗೆ ರಾಸಾಯನಿಕ ಸೋಕಿದ್ದರೆ ಅಥವಾ ರೋಗಗ್ರಸ್ಥವಾಗಿದ್ದರೆ ಈ ಪ್ರಕ್ರಿಯೆಯಿಂದ ಶುದ್ಧ ಬೀಜವಾಗುತ್ತದೆ. ಬೆಳೆ ರೋಗಗ್ರಸ್ಥವಾಗುವುದಿಲ್ಲ ಎನ್ನುತ್ತಾರೆ ಚಿದಂಬರ.

ಬೀಜ ಬಿತ್ತನೆಯ ನಂತರ ಬೆಳವಣಿಗೆ ಹಂತದಲ್ಲಿ ಶುಂಠಿ ಬೆಳೆಗೆ ಕೊಟ್ಟಿಗೆ ಗೊಬ್ಬರದ ಜೊತೆಗೆ ಹಸಿರೆಲೆಗೊಬ್ಬರ, ಎರೆಗೊಬ್ಬರ, ಜೀವಾಮೃತದಂತಹ ದ್ರವರೂಪಿ ಗೊಬ್ಬರಗಳು, ಸ್ಲರಿ, ಜೈವಿಕ ಗೊಬ್ಬರಗಳನ್ನು ಕಾಲ ಕಾಲಕ್ಕೆ ನೀಡಿದ್ದಾರೆ. ಇದರ ಜೊತೆಗೆ ಮೇಲುಗೊಬ್ಬರವಾಗಿ ಪ್ರತಿ ಗುಣಿಗೂ ಬೊಗಸೆಯಷ್ಟು ಹುಡಿ ಗೊಬ್ಬರ ಮತ್ತು ಜೀವಾಮೃತವನ್ನು ಕೊಟ್ಟಿದ್ದಾರೆ. ಮೊದಲ ಬೆಳೆಯಾದ್ದರಿಂದ ಗೊಬ್ಬರ-ಗೋಡಿನ ಲೆಕ್ಕಾಚಾರ ಕೊಡೋದು ಕಷ್ಟ ಎಂಬ ಚಿದಂಬರ ಅವರ ಪ್ರಾಮಾಣಿಕ ಮಾತಿನ ಹಿಂದೆ ನಿಸ್ವಾರ್ಥ ಪ್ರಯತ್ನ ಒಂದು ಇಣುಕುತ್ತದೆ. ಈ 5 ಗುಂಟೆಯ ಸಾವಯವ ಶುಂಠಿ ಕೃಷಿಯ ಯಶಸ್ಸು ಹತ್ತು ಗುಂಟೆಗೆ ವಿಸ್ತರಿಸುವಂತೆ ಚಿದಂಬರ ಅವರನ್ನು ಪ್ರೇರೇಪಿಸಿದೆ. ಜೊತೆಗೆ ಮೂರು ಎಕರೆ ಗದ್ದೆಯಲ್ಲಿ ಸಾವಯವ ಭತ್ತ ಬೆಳೆಸುವುದಕ್ಕೆ ಉತ್ತೇಜನ ನೀಡಿದೆ.

**ಕೊಳೆರೋಗ ಇವರನ್ನೂ ಬಿಟ್ಟಿಲ್ಲ !**

ಸಾವಯವ ಪದ್ಧತಿಯಲ್ಲಿ ಶುಂಠಿ ಬೆಳೆಯುತ್ತಿದ್ದೇವೆ ಎಂದಾಕ್ಷಣ ರೋಗ ರಹಿತವಾಗಿ ಬೆಳೆಯುವುದು ಅಸಾಧ್ಯ. ಈ ಮಾತನ್ನು ಚಿದಂಬರ ಅವರೂ ಒಪ್ಪತ್ತಾರೆ. ಅವರು ಬೆಳೆದ ಶುಂಠಿಗೂ ಕೊಳೆರೋಗ ಅಂಟಿ ಕೊಂಡಿತ್ತಂತೆ. ಆ ಸಮಯದಲ್ಲಿ ಇವರೊಂದು ಸರಳ ಉಪಾಯ ಮಾಡಿದ್ದಾರೆ. ಅದೇನೆಂದರೆ ; ಸುಣ್ಣ ಮತ್ತು ಮೈಲುತುತ್ತ ಅಥವಾ ಗಂಜಲವನ್ನು ಮಿಶ್ರಮಾಡಿ ಕೊಳೆಯುಕ್ತ ಶುಂಠಿ ಗಿಡಗಳಿಗೆ ಕೊಟ್ಟಿದ್ದಾರೆ.

ಶೀತ ಹೆಚ್ಚಾದರೆ ಕೊಳೆ ರೋಗ ಬರುತ್ತದೆ. ಹಾಗಂತ ಆ ರೋಗ ನಿವಾರಣೆಗೆ ಯದ್ವಾತದ್ವಾ ರಾಸಾಯನಿಕ ಔಷಧ, ಕ್ರಿಮಿನಾಶಕ ಹೊಡೆಯುವ ಅಗತ್ಯವಿಲ್ಲ. ರಾಸಾಯನಿಕ ಕೃಷಿಯಲ್ಲಿ ಬೆಳೆಯುವವರು ಶುಂಠಿ ಕೊಯ್ಲಿಗೆ ಬರುವುದರೊಳಗೆ ಹದಿನೈದು ಸುತ್ತ ರಾಸಾಯನಿಕ ಕೀಟನಾಶಕಗಳನ್ನು ಸಿಂಪಡಿಸುತ್ತಾರೆ. ಅದರ ಅವಶ್ಯಕತೆ ಇಲ್ಲ. ಅದರ ಬದಲು ನಮ್ಮ ಭೂಮಿಯ ಅಥವಾ ಸಸ್ಯದ

ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಬೇಕು. ಅದಕ್ಕಾಗಿ ಜೀವಾಮೃತ, ಬೇವಿನ ಹಿಂಡಿ, ಎರೆಗೊಬ್ಬರ ಬಳಸಿದರೆ, ರೋಗ ಬರುವುದಿಲ್ಲ. ಇದಕ್ಕಿರುವ ದಾರಿ ಎಂದರೆ ಮೈಲುತುತ್ತ, ಸುಣ್ಣ ಅಥವಾ ಗಂಜಲದ ಮಿಶ್ರಣ ಸಿಂಪಡಣೆ ಎನ್ನುತ್ತಾರೆ ಚಿದಂಬರ.

**ಲಾಭ-ನಷ್ಟದ ಲೆಕ್ಕಾಚಾರ;**

ಸಾವಯವದಲ್ಲಿ ಶುಂಠಿ ಬೆಳೆದರೆ ಲಾಭಕ್ಕಿಂತ ನಷ್ಟವೇ ಹೆಚ್ಚು ಎನ್ನುವವರಿಗೆ ಚಿದಂಬರ ಚಕಾ ಚೆಕ್ ಲೆಕ್ಕ ಕೊಡುತ್ತಾರೆ. ಶುಂಠಿ ಬೀಜವನ್ನು ನಾನು ಕೊಂಡು ತರುವುದಿಲ್ಲ. ಕೆಲವರಂತು ಕೊಟ್ಟಿಗೆ ಗೊಬ್ಬರವನ್ನೂ ಕೊಂಡು ತರುತ್ತಾರೆ. ನಮ್ಮ ತೋಟದಲ್ಲೇ ಬೇಕಾದಷ್ಟು ಸಾವಯವ ಗೊಬ್ಬರ ತಯಾರಿಸುತ್ತೇನೆ. ಬೇವಿನಿಂಡಿ, ಬೇವಿನೆಣ್ಣೆ, ಜೀವಾಮೃತಕ್ಕೊಂದಿಷ್ಟು ಬೆಲ್ಲ, ಕೆಲಸಕ್ಕೆ ಅಪರೂಪಕ್ಕೆ ಆಳುಗಳು -ಇವು ಬಿಟ್ಟರೆ ನನಗೆ ಬೇರೇನೂ ಖರ್ಚಿಲ್ಲ. ಅಂದಾಜು 1000 ರೂಪಾಯಿ ಖರ್ಚಿನಲ್ಲಿ ಎಲ್ಲವೂ ಮುಗಿಯುತ್ತವೆ. ಇಷ್ಟೆಲ್ಲ ತೊಡಗಿಸಿದರೆ ಪ್ರತೀ ವರ್ಷ ಸರಾಸರಿ 12 ಚೀಲ ಶುಂಠಿ ಸಿಗುತ್ತಿದೆ.

ಅವಲಂಬನೆಯ ಕೃಷಿಯಲ್ಲಿ ಬೀಜ, ಗೊಬ್ಬರ, ಔಷಧಿ, ಹೆಚ್ಚು ಆಳುಗಳು, ಸಾಗಾಣಿಕೆ ಎಲ್ಲವೂ ಸೇರಿ ಕನಿಷ್ಠ 5000 ರೂಪಾಯಿ ಖರ್ಚು. ಅಲ್ಲಿ ಸರಾಸರಿ 14-15 ಚೀಲ ಇಳುವರಿ ಸಿಗುತ್ತದೆ. ಪ್ರತಿ ಚೀಲಕ್ಕೆ ಸರಾಸರಿ 1000 ಸಿಕ್ಕಿದರೂ ಸಾವಯವಕ್ಕೂ ರಾಸಾಯನಿಕಕ್ಕೂ ಅಂತ ಲಾಭವೇನೂ ಕಾಣುವುದಿಲ್ಲ ಎಂಬುದು ಚಿದಂಬರ ಅಭಿಪ್ರಾಯ.

ಸಾವಯವ ಶುಂಠಿಗೂ - ರಾಸಾಯನಿಕ ಶುಂಠಿಗೂ ಗಾತ್ರ, ಆಕಾರ, ರುಚಿಯಲ್ಲಿ ವ್ಯತ್ಯಾಸವನ್ನೂ ಗಮನಿಸಿಲ್ಲ. ಆದರೆ ಒಳಸುರಿ ಖರ್ಚು ಕಡಿಮೆಯಾಗಿರುವುದರಿಂದ ಭೂಮಿಯ ಫಲವತ್ತತೆ ಸಂರಕ್ಷಣೆಯಾಗುತ್ತಿರುವುದರ ಮುಂದೆ ಉಳಿದದ್ದೆಲ್ಲವೂ ಗೌಣ. ಮುಂದೆ ಒಂದು ದಿನ ಇದೆನ್ನೆಲ್ಲ ಸೇರಿಸಿ ಲಾಭ ಪಡೆಯಬಹುದು ಎನ್ನುವುದು ಚಿದಂಬರ ಅವರಿಗಿರುವ ಆತ್ಮ ವಿಶ್ವಾಸ.

ಪ್ರಸ್ತುತ ಗೊಬ್ಬರ, ಕೃಷಿ ಕಾರ್ಮಿಕರ ಸಮಸ್ಯೆ ವಿಪರೀತ. ಹಾಗಾಗಿ ರೈತರು ತುಸು ಅವಲಂಬನೆ ತಪ್ಪಿಸುವ ಉಪಾಯಗಳನ್ನು ಕಂಡುಕೊಳ್ಳಲೇಬೇಕಾದ ಅನಿವಾರ್ಯತೆ ಯಿದೆ. ಈ ಪರಿಸ್ಥಿತಿಯಲ್ಲಿ ಸಾವಯವ ಕೃಷಿ ಇದಕ್ಕೆ ಉತ್ತಮ ಪರ್ಯಾಯ ವಾಗಬಹುದು ಎನ್ನುವುದು ಚಿದಂಬರ ಅವರ ಅನುಭವದ ಮಾತು.

**ಸಾವಯವ ಕೃಷಿ ವಿಸ್ತರಣೆ**

ಶುಂಠಿ ಕೃಷಿಯ ಯಶಸ್ಸು ಚಿದಂಬರ ಅವರನ್ನು 5 ಗುಂಟೆಯಿಂದ ಹತ್ತು ಗುಂಟೆಯಲ್ಲಿ ಶುಂಠಿ ಬೆಳೆಯುವಂತೆ ಪ್ರೇರೇಪಿಸಿತು. ನಂತರ 4 ಎಕರೆಯಲ್ಲಿ ಸಾವಯವ ಭತ್ತ ಬೆಳೆಯಲು ಆರಂಭಿಸಿ ದರು. ಅದೇ ಗದ್ದೆಯಲ್ಲಿ ಬೇಸಿಗೆಯಲ್ಲಿ ಅಲಸಂದೆ, ಉದ್ದು, ತರಕಾರಿ ಇತ್ಯಾದಿಗಳನ್ನು ಬೆಳೆದುಕೊಳ್ಳುತ್ತಿದ್ದಾರೆ. 2 ವರ್ಷದಿಂದ 30 ಗುಂಟೆ ಕಾಫಿಯನ್ನೂ ಸಾವಯವಕ್ಕೆ ಅಳವಡಿಸುತ್ತಿದ್ದಾರೆ.

**ದೇಸಿ ಭತ್ತ**
**ಪ್ರಾತ್ಯಕ್ಷಿಕೆ ಕೇಂದ್ರ**

ಸಾವಯವ ಗ್ರಾಮ ಅನುಷ್ಠಾನದ ಪ್ರೇರಣಾ ಸಂಸ್ಥೆ ಭೂಮಿ ಸುಸ್ಥಿರ ಅಭಿವೃದ್ಧಿ ಸಂಸ್ಥೆಯ ಸಹಕಾರದಿಂದ ಚಿದಂಬರ ಅವರು ತಮ್ಮ ಗದ್ದೆಯಲ್ಲಿ 18 ದೇಸಿ ಭತ್ತದ ತಳಿಗಳ ಪ್ರಾತ್ಯಕ್ಷಿಕೆಯನ್ನು ಆರಂಭಿಸಿದರು. ಪರೀಕ್ಷೆಗೆ ಒಡ್ಡಿದ ಈ ತಳಿಗಳಲ್ಲಿ ಆರು ತಳಿಗಳು ಯಶಸ್ವಿಯಾದವು. ಅದರಲ್ಲಿ ಕೆಲವನ್ನು ಅಕ್ಕಪಕ್ಕದ ಹಳ್ಳಿಗಳಿಗೆ ಬೀಜೋತ್ಪಾದನೆಗಾಗಿ ವಿತರಣೆ ಮಾಡಿದ್ದಾರೆ. ಇವರ ಗದ್ದೆಯಲ್ಲಿ ರತ್ನಚೂಡಿ, ಬಾಸುಮತಿ, ಆಲೂರು ಸಣ್ಣ ಸೇರಿದಂತೆ ನಾಲ್ಕು ತಳಿಗಳನ್ನು ಸಂರಕ್ಷಿಸುತ್ತಿದ್ದಾರೆ.

**ಗೋಡ್ವಿನ್ ನಗುವಿನಲ್ಲಿ ಸಾವಯವ ಕೃಷಿಯ ಗೆಲುವು!**

**ಸಾವಯವ ಕೃಷಿ – ಕೇವಲ ಎರೆಗೊಬ್ಬರ, ಜೀವಾಮೃತ, ಗಂಜಲ, ಆಕಳು ಅಷ್ಟೇ ಅಲ್ಲ. ಅದೊಂದು ಸಂಸ್ಕೃತಿ. ಈ ಪದ್ಧತಿಯಿಂದ ನಮ್ಮ ಕೃಷಿ ಚಟುವಟಿಕೆಗಳು ಬದಲಾಗಿವೆ. ನಾವು ಬದಲಾಗಿದ್ದೇವೆ. ನಮ್ಮೂರಿನಲ್ಲಿ ಸಾಮಾಜಿಕ ಬದಲಾವಣೆಯಾಗಿದೆ**

**–ಗೋಡ್ವಿನ್**

ಈ ಪೀಸ್ ತಿಂದು ನೋಡಿ ಸರ್ - ಗೋಡ್ವಿನ್ ವೃತ್ತಾಕಾರವಾಗಿ ಕತ್ತರಿಸಿದ ಅನಾನಸ್ ಬಿಲ್ಲೆಗಳನ್ನು ತುಂಬಿದ ತಟ್ಟೆಯನ್ನು ನನ್ನ ಮುಂದೆ ಹಿಡಿದರು. ಆ ಬಿಲ್ಲೆ ತೆಗೆದು ಬಾಯಲ್ಲಿಟ್ಟುಕೊಂಡೆ. ವಾಹ್ ! ಅದೆಂಥಾ ರುಚಿ.

ಇದಿನ್ನೂ ಬಲಿಯಬೇಕು ಸಾರ್. ಆದ್ರೂ ಟೇಸ್ಟ್ ಬಹಳ ಚೆನ್ನಾಗಿದೆ. ಯಾಕೆ ಗೊತ್ತಾ. ಇದು ಸಾವಯವ ಕೃಷಿಯಲ್ಲಿ ಬೆಳೆದದ್ದು. ಅನಾನಸ್ ಮಾತ್ರವಲ್ಲ, ಬಾಳೆ, ಕಿತ್ತಳೆ, ತರಕಾರಿ, ಭತ್ತ, ಎಲ್ಲವನ್ನೂ ಸಾವಯವ ಕೃಷಿ ಪದ್ಧತಿಯಲ್ಲೇ ಬೆಳೆಯುತ್ತಿದ್ದೇವೆ. ಮೂರು ವರ್ಷ ಆಯ್ತು ನೋಡಿ, ಇದನ್ನು ಶುರು ಮಾಡಿ- ಹಣ್ಣಿನ ಸಿಹಿಯ ಹಿಂದಿನ ಗುಟ್ಟು ಹೇಳಿದರು ಗೋಡ್ವಿನ್.

ಗೋಡ್ವಿನ್ ಉದಯೋನ್ಮುಖ ಸಾವಯವ ಕೃಷಿಕ. ಮೂಡಿಗೆರೆ ಸಮೀಪವಿರುವ ಫಲ್ಗುಣಿಯ ಮಜುರೆ ಗ್ರಾಮ ಸಬ್ಬೇನಹಳ್ಳಿಯಲ್ಲಿ ವಾಸವಾಗಿದ್ದಾರೆ. ಮನೆ ಪಕ್ಕದಲ್ಲೇ ಕಾಫಿ ತೋಟ. ಎದುರುಗಡೆ ಗದ್ದೆ. ಇವರದ್ದು ಒಟ್ಟು ಹದಿಮೂರು ಎಕರೆ ಜಮೀನು. ಏಳು ಎಕರೆ ಕಾಫಿ ತೋಟ. ನಡುವೆ ಉಪಬೆಳೆಗಳಾಗಿ ಅನಾನಸ್, ಕಿತ್ತಳೆ, ಹಲಸು, ಮಾವು. ಹೆಚ್ಚುವರಿ ಆದಾಯಕ್ಕಾಗಿ ಏಲಕ್ಕಿ, ಮೆಣಸು, ಸೀತಾಫಲ ಮರಗಳ ಮಿಶ್ರಕೃಷಿ ಇದೆ. ಆರು ಎಕರೆಯಲ್ಲಿ ಗದ್ದೆ. ಎಲ್ಲವೂ ಮಳೆಯಾಶ್ರಿತದಲ್ಲೇ ಕೃಷಿ.

ಮೂರು ವರ್ಷದ ಹಿಂದೆ ಭೂಮಿ ಸುಸ್ಥಿರ ಅಭಿವೃದ್ಧಿ ಸಂಸ್ಥೆ, ಫಲ್ಗುಣಿಯಲ್ಲಿ ಸಾವಯವ ಕೃಷಿ ಯೋಜನೆ ಅನುಷ್ಠಾನಕ್ಕೆ ಮುಂದಾದಾಗ ಗೋಡ್ವಿನ್ ತಮ್ಮ ಜಮೀನನ್ನು ಸಾವಯವಕ್ಕೆ ಅಳವಡಿಸಲು ಸಿದ್ಧರಾದರು. ಈ ಪದ್ಧತಿ ಹೇಗೋ ಏನೋ ಅಂತ ಅಳುಕಿನಿಂದಲೇ ಜಮೀನಿನ ಅಲ್ಪ ಭಾಗವನ್ನು ಅಂದರೆ ನಾಲ್ಕು ಎಕರೆ ಕಾಫಿ ತೋಟ, 200 ಗಿಡ ಅನಾನಸ್, ಒಂದಷ್ಟು ಕಿತ್ತಳೆ, ಗೋಡಂಬಿ, 200 ಬಾಳೆ, ಮೂರು ಎಕರೆ ಭತ್ತವನ್ನು ಸಾವಯವ ಕೃಷಿಗೆ ಅಳವಡಿಸಿದರು.

**ಏಳು ಟ್ರಾಕ್ಟರ್ ಎರೆಗೊಬ್ಬರ**

ಸಾವಯವ ಕೃಷಿ ಪರಿಚಯವಾದ ನಂತರದಲ್ಲಿ ಸಂಸ್ಥೆಯ ನೆರವಿನೊಂದಿಗೆ ಹಸಿರೆಲೆಗೊಬ್ಬರ, ಎರೆಹುಳು ಗೊಬ್ಬರ ತಯಾರಿಕೆ ಆರಂಭಿಸಿದರು. ತೋಟದ ಮೂಲೆಯ ಪಾಳು ಮನೆಯನ್ನೇ ಎರೆಹುಳು ಘಟಕವನ್ನಾಗಿಸಿದರು. ಆಕಳ ಸೆಗಣಿ, ಗಂಜಲ, ಬೇಲಿಯಲ್ಲಿದ್ದ ಕಾಡು ಮರಗಳ ತರಗೆಲೆ, ಅಡುಗೆ ತ್ಯಾಜ್ಯ, ಜಾನುವಾರು ತಿಂದುಳಿದ ಮೇವು ಬಳಸಿ ಸಾವಯವ ಗೊಬ್ಬರ ಉತ್ಪಾದನೆ. ಬಳಸುರಿಗಳೆಲ್ಲಾ ತೋಟದ ಅಂಗಳದಲ್ಲೇ ಸಿಕ್ಕಿದ್ದರಿಂದ ಗೊಬ್ಬರ ಉತ್ಪಾದನೆಗೆ ನಯಾಪೈಸೆ ಖರ್ಚಿಲ್ಲ. ಇಂಥದ್ದೊಂದು ಸರಳ ವ್ಯವಸ್ಥೆಯಲ್ಲಿ ವರ್ಷಕ್ಕೆ ಏಳು ಟ್ರಾಕ್ಟರ್ ಗೊಬ್ಬರ ಒಟ್ಟು ಮಾಡಿದರು. ಪ್ರತಿ ಕಾಫಿಗಿಡಕ್ಕೆ ಪ್ರತ್ಯೇಕವಾಗಿ ಗೊಬ್ಬರ ಕೊಟ್ಟರು. ಮಳೆಗಾಲಕ್ಕೆ ಮುನ್ನ ಜೀವಾಮೃತ ಕೊಟ್ಟರು. ಇದೇ ಪದ್ಧತಿಯನ್ನು, ಅನಾನಸ್, ಕಿತ್ತಲೆ ಗಿಡಗಳಿಗೂ ಅನುಸರಿಸಿದರು.

ಸಾವಯವ ಕೃಷಿಯಿಂದ ಆರಂಭದಲ್ಲಿ ಇಳುವರಿ ಕಡಿಮೆಯಾಯಿತು. ಆದರೆ ಅನಾನಸ್ ಗಿಡದಲ್ಲಿ ಎಲೆಗಳು ಸೊಂಪಾಗಿ ಬೆಳೆದವು. ಹಣ್ಣಿನ ತೂಕ ಹೆಚ್ಚಾಯಿತು. ರುಚಿಯಂತೂ ಅದ್ಭುತ ಎಂದು ಸಾವಯವದ ಪರಿಣಾಮವನ್ನು ವರ್ಣಿಸುವ ಗೋಡ್ವಿನ್, ಬಾಳೆ, ಕಿತ್ತಳೆಯ ಇಳುವರಿಯಲ್ಲಾಗಲಿ, ರುಚಿಯಲ್ಲಾಗಲಿ ಅಂಥ ವಿಶೇಷ ಬದಲಾವಣೆ ಕಾಣಲಿಲ್ಲ ಎನ್ನುತ್ತಾರೆ.

**ಸಾವಯವದಲ್ಲಿ ಮೂರು ಎಕರೆ ಭತ್ತ**

ಸಾವಯವ ತೋಟದ ಗೆಲುವು ಮೂರು ಎಕರೆ ಭತ್ತವನ್ನು ಸಾವಯವ ಕೃಷಿ ಪದ್ಧತಿಗೆ ಅಳವಡಿಸಲು ಪ್ರೇರೇಪಿಸಿತು. ಆರಂಭದಲ್ಲಿ ಪುಟ್ಟ ಭತ್ತ, ಕಿರ್ವಾಣದಂಥ ಸ್ಥಳೀಯ ಭತ್ತದ ತಳಿಗಳನ್ನು ಬಿತ್ತನೆ ಮಾಡಿದರು. ಮೊದಲ ವರ್ಷ ಎಕರೆಗೆ ಒಂಭತ್ತೂವರೆ ಪಲ್ಲ ಇಳುವರಿ ಬಂತು. ಅದು ಎರಡನೇ ವರ್ಷಕ್ಕೆ 13 ಪಲ್ಲಕ್ಕೆ ಏರಿತು.

ರಾಸಾಯನಿಕ ಪದ್ಧತಿಯಲ್ಲಿ 17 ರಿಂದ 18 ಪಲ್ಲ ಬೆಳೆಯುತ್ತೇವೆ. ಗೊಬ್ಬರ, ಬೀಜ ಅಂತ ಸಾಕಷ್ಟು ಖರ್ಚಾಗುತ್ತದೆ. ಈ ಪದ್ಧತಿಯಲ್ಲಿ ಮೊದಲು ಇಳುವರಿ ಕಡಿಮೆಯಾಯ್ತು. ಮುಂದಿನ ವರ್ಷ ಸ್ವಲ್ಪ ಹೆಚ್ಚಾಯ್ತು. ಈ ವರ್ಷ ಏನಾಗುತ್ತದೋ ನೋಡ್ಬೇಕು ಎನ್ನುತ್ತಾರೆ ಗೋಡ್ವಿನ್.

ಇಳುವರಿ ಇಳಿದಿದ್ದಕ್ಕೆ ಗೋಡ್ವಿನ್‌ಗೆ ಬೇಸರವಿಲ್ಲವಂತೆ. ಏಕೆಂದರೆ, ಈ ಮೂರು ಎಕರೆಗೆ ಬೇಕಾದ ಗೊಬ್ಬರವನ್ನು ತೋಟದಲ್ಲೇ ಸಿದ್ಧ ಮಾಡಿಕೊಂಡಿದ್ದಾರೆ. ನೂರಾರು  ರೂಪಾಯಿ ಗೊಬ್ಬರಕ್ಕೆ ಹಾಕುವ ಖರ್ಚು ಉಳಿದಿದೆ. ಗದ್ದೆಗೆ ಅಜೋಲಾ ಬಿಟ್ಟಿದ್ದರಿಂದ ಹೆಚ್ಚುವರಿ ಗೊಬ್ಬರ ಲಭ್ಯವಾಗುವ ಜೊತೆಗೆ ಕಳೆ ನಿಯಂತ್ರಣಗೊಂಡಿದೆ. ಒಂದು ಸಾರಿ ಕಳೆ ತೆಗೆಯೋದಕ್ಕೆ ಎಕರೆಗೆ ಎಂಟು ಆಳು ಬೇಕು. ಮೂರರಿಂದ ನಾಲ್ಕು ಸಾವಿರದಷ್ಟು ಕೂಲಿ ರ್ಚಾಗುತ್ತಿತ್ತು. ಅಜೋಲಾ ಬಿಟ್ಟ ಮೇಲೆ ಕಳೆ ಇಲ್ಲದಂತಾಗಿದೆ. ಇಳುವರಿಯಲ್ಲಿ ಹೋಗಿದ್ದು, ಕೂಲಿ ಹಣದ ಉಳಿಕೆ ರೂಪದಲ್ಲಿ ಬಂದಿದೆ ಎಂದು ಖುಷಿಯಿಂದ ಲೆಕ್ಕ ಹೇಳುತ್ತಾರೆ ಗೋಡ್ವಿನ್.

ಮೊದಲು ಕಳೆ ತೆಗೆಯಲು ಟಿಲ್ಲರ್ ಹೊಡೆಯುತ್ತಿದ್ದೆವು. ಆಗ ಕಪ್ಪೆ, ಏಡಿ ಎಲ್ಲ ಸತ್ತು ಹೋಗ್ತಿದ್ದವು. ಈಗ ಅಜೋಲಾ ಬಿಡುವುದರಿಂದ ಅಂಥ ಅನಾಹುತಗಳು ತಪ್ಪಿವೆ ಎಂದು ತಮ್ಮ ಪರಿಸರ ಪ್ರೀತಿ ವ್ಯಕ್ತಪಡಿಸುತ್ತಾರೆ ಅವರು.

**ಮಾರುಕಟ್ಟೆ ಚಿಂತೆಯಿಲ್ಲ**

ಇಷ್ಟೆಲ್ಲ ಸಾವಯವ ಉತ್ಪನ್ನಗಳನ್ನು ಬೆಳೆಯುತ್ತಿರುವ ಗೋಡ್ವಿನ್‌ಗೆ ಮಾರುಕಟ್ಟೆಯ ಚಿಂತೆಯಿಲ್ಲ. ಏಕೆಂದರೆ ಬೆಳೆದಿದ್ದು ಮೊದಲು ನಮಗೆ, ಉಳಿದಿದ್ದು ನಂತರ ಮಾರುಕಟ್ಟೆಗೆ ಎನ್ನುವ ಸಿದ್ಧಾಂತ ಇವರದ್ದು. ಬೆಳೆದ ಬೆಳೆಗಳಲ್ಲಿ ಭತ್ತ, ಹಣ್ಣಿನ ಬೆಳೆಗಳನ್ನು ಮಾರಾಟ ಮಾಡುತ್ತಾರೆ. ಕೆಲವನ್ನು ತೋಟಕ್ಕೆ ಬಂದು ಕೊಳ್ಳುತ್ತಾರೆ.

ಇನ್ನು ಮುಂದೆ ನಮ್ಮ ಸಂಘದ್ದೇ ಸಾವಯವ ಮಳಿಗೆ ತೆರೆಯುತ್ತಿದ್ದೇವೆ. ನಮ್ಮ ಸಾವಯವ ಉತ್ಪನ್ನಗಳನ್ನು ಆ ಮಳಿಗೆಯಲ್ಲಿಟ್ಟು ಮಾರಾಟ ಮಾಡುತ್ತೇವೆ. ನಮ್ಮ ತೋಟದ ಅನಾನಸ್‌ಗೆ ಸಾಕಷ್ಟು ಬೇಡಿಕೆಯಿದೆ. ನಮಗೆ ಪೂರೈಸುವುದಕ್ಕೇ ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ ಗೋಡ್ವಿನ್.

**ಜೀವನವೂ ಸಾವಯವ**

ಸಾವಯವ ಕೃಷಿ  - ಕೇವಲ ಪದ್ಧತಿಯಷ್ಟೇ ಅಲ್ಲ, ಅದೊಂದು ಸಂಸ್ಕೃತಿ, ಜೀವನ ಶೈಲಿ ಎನ್ನುವುದು ಗೋಡ್ವಿನ್-ಜಸೆಂತಾ ದಂಪತಿಯ ಅಭಿಪ್ರಾಯ. ಈ ಕೃಷಿ ಪದ್ಧತಿ ಪರಿಚಯವಾದ ಮೇಲೆ ನಾವು ವಿಷಮುಕ್ತ ತರಕಾರಿಗಳನ್ನು ಬೆಳೆದುಕೊಳ್ಳುತ್ತಿದ್ದೇವೆ. ರುಚಿ ಕಟ್ಟಾದ ಆಹಾರ ಸೇವಿಸುತ್ತಿದ್ದೇವೆ. ವಾರಕ್ಕೆ ನೂರು ರೂಪಾಯಿ ತರಕಾರಿಗೆ ಖರ್ಚಾಗುತ್ತಿತ್ತು. ಈಗ ನಮ್ಮ ಮನೆಯಲ್ಲೇ ಹತ್ತಾರು ತರಹದ ತರಕಾರಿ ಬೆಳೆದು, ಬೇರೆಯವರಿಗೂ ಹಂಚುತ್ತಿದ್ದೇವೆ ಎನ್ನುತ್ತಾರೆ ಗೋಡ್ವಿನ್.

ರಾಸಾಯನಿಕ ಗೊಬ್ಬರ ಬಳಕೆಯಿಂದ ಭೂಮಿ ಯಲ್ಲಿನ ಸತ್ವಗಳು ನಾಶವಾಗುತ್ತವೆ ಎಂಬುದನ್ನು ಮನಗಂಡಿರುವ ಗೋಡ್ವಿನ್, ಕನಿಷ್ಠ ಮುಂದಿನ ಪೀಳಿಗೆಗಾದರೂ ಸ್ವಚ್ಛ ಭೂಮಿಯನ್ನು ಬಿಟ್ಟು ಹೋಗೋಣ ಎಂದು ಸಂಕಲ್ಪ ಮಾಡಿದ್ದಾರೆ. ಅದಕ್ಕಾಗಿಯೇ ತನ್ನ ಇಡೀ ಜಮೀನನ್ನು ಸಾವಯವ ಪದ್ಧತಿಗೆ ಅಳವಡಿಸಲು ಸಿದ್ಧತೆ ನಡೆಸಿದ್ದಾರೆ.

**ಸಾವಯವದಿಂದ ಸಾಮಾಜಿಕ ಬದಲಾವಣೆ !**

ಸಾವಯವ ಕೃಷಿ ಪದ್ಧತಿ ಗೋಡ್ವಿನ್ ಪಾಲಿಗೆ ಒಂದು ಸಂಸ್ಕೃತಿ. ಈ ಕೃಷಿ ಪದ್ಧತಿ ಪರಿಚಯಿಸುವುದಕ್ಕಾಗಿ ಬಂದಂತಹ ಸಾವಯವ ಗ್ರಾಮ ಯೋಜನೆ ನಮ್ಮೂರಿನಲ್ಲೊಂದು ಸಾಮಾಜಿಕ ಬದಲಾವಣೆ ತಂದಿತು ಎನ್ನುತ್ತಾರೆ ಅವರು.

ಯೋಜನೆ ಬರುವುದಕ್ಕೆ ಮುನ್ನ ಈ ಊರಿನವರು ಒಟ್ಟಾಗಿ ಸೇರುವುದೇ ಕಷ್ಟವಾಗಿತ್ತಂತೆ. ಆದರೆ ಕಳೆದ ಮೂರು ವರ್ಷದಿಂದ ಪ್ರತಿ ಎರಡು ವಾರಕ್ಕೊಮ್ಮೆ ಊರಿನ ಎಲ್ಲ ಸದಸ್ಯರು ಒಟ್ಟಾಗಿ ಸೇರುತ್ತಾರೆ. ಊರಿನ ಆಗು-ಹೋಗುಗಳ ಬಗ್ಗೆ ಚರ್ಚಿಸುತ್ತಾರೆ. ಹೀಗೆ ಸಭೆ ನಡೆಸುವುದಕ್ಕಾಗಿಯೇ ಊರಿನಲ್ಲೊಂದು ಸಾವಯವ ಸಮುದಾಯ ಭವನ ನಿರ್ಮಿಸಲು ಸಂಕಲ್ಪ ಮಾಡಿದ್ದಾರೆ. ಇದಕ್ಕಾಗಿ ವಂತಿಕೆ ಸಂಗ್ರಹಿಸಿದ್ದಾರೆ. ಸರ್ಕಾರದವರು ನಿವೇಶನ ನೀಡಿದ ಕೂಡಲೇ ಕಟ್ಟಡ ಎದ್ದು ನಿಲ್ಲುತ್ತದೆ. ಸಾವಯವ ಕೃಷಿ ಸಂಘಟನೆ ಸುಸ್ಥಿರವಾಗುತ್ತದೆ ಎನ್ನುತ್ತಾರೆ ಗೋಡ್ವಿನ್.

*ಸಂಪಾದಕರು :ಗಾಣಧಾಳು ಶ್ರೀಕಂಠ*

# ಸಾವಯವ ತೋಟಕ್ಕೆ ಜೀವವೈವಿಧ್ಯದ ಮೆರುಗು…!

**ಸಾವಯವ ತೋಟಕ್ಕೆ ಜೀವವೈವಿಧ್ಯದ ಮೆರುಗು…!**

**ಫಲ್ಗುಣಿಯ ಗೋಪಾಲ್ ಮೂರು** ವರ್ಷದ ಹಿಂದೆ ಆರಂಭಿಸಿದ್ದು ಸಾವಯವ ಕೃಷಿಯನ್ನು. ಇವತ್ತು ಅವರ ತೋಟದಲ್ಲಿ ಜೀವ ವೈವಿಧ್ಯವೇ ಮೇಳೈಸಿದೆ. ಈ ನಡುವಿನ ಪಯಣದಲ್ಲಿ ಅವರು ಕಲಿತಿದ್ದು ಅಪಾರ. ಆ ಅನುಭವವನ್ನು ಈಗ ತಮ್ಮ ತೋಟಕ್ಕೆ ಬರುವ ಪ್ರವಾಸಿಗರೊಂದಿಗೆ ಹಂಚಿಕೊಳ್ಳುತ್ತಿದ್ದಾರೆ.

ತೋಟ ಪ್ರವೇಶಿಸಿದರೆ ಕಾನನ ಹೊಕ್ಕಿದ ಅನುಭವ. ಒಂದೆಡೆ ಅಡಕೆ, ಕಾಫಿ, ಮೆಣಸು ಮಿಶ್ರ ಬೆಳೆಗಳ ಮೇಳ. ಇನ್ನೊಂದೆಡೆ ಎರೆಗೊಬ್ಬರ, ಸಾವಯವ ಯೂರಿಯಾ ಘಟಕಗಳು, ಜೀವಾಮೃತ ತಯಾರಿಕೆ, ಅಜೊಲ ತೊಟ್ಟಿಯ ಸಾಲು. ಎಡಗಡೆ ಗೋಡೆಯ ಮಗ್ಗುಲಲ್ಲೇ ತರಕಾರಿ ತೋಟ. ತೋಟದ ಬೇಲಿಗಳಲ್ಲಿ ವೈವಿಧ್ಯಮಯ ಬಿದಿರು, ಹೊನ್ನೆ, ಮತ್ತಿ, ಸಾಗುವಾನಿ, ಹೆಬ್ಬೇವಿನಂತಹ ಕಾಡು ಮರಗಳು….

ಇದು ಮೂಡಿಗೆರೆ ತಾಲ್ಲೂಕಿನ ಫಲ್ಗುಣಿಯ ಕೃಷಿಕ ಗೋಪಾಲ್ ಅವರ ತೋಟ. ಒಟ್ಟು ಏಳು ಎಕರೆ ಮೂವತ್ತು ಗುಂಟೆ ವಿಸ್ತೀರ್ಣ. ಅದರಲ್ಲಿ ಒಂದೂಕಾಲು ಎಕರೆಯಲ್ಲಿ ಭತ್ತ, ಒಂದು ಎಕರೆ ಹತ್ತು ಗುಂಟೆಯಲ್ಲಿ ಅಡಿಕೆ, ಬಾಳೆ ಮಿಶ್ರ ಕೃಷಿ, ಆರು ಎಕರೆಯಲ್ಲಿ ಕಾಫಿ ಮತ್ತು ಕಾಳು ಮೆಣಸು ಮಿಶ್ರ ಕೃಷಿ. ತೋಟದ ಸುತ್ತಾ ಕಾಡು ಮರಗಳು, ನಡು ನಡುವೆ ಜಾಯಿಕಾಯಿ, ಕಾಳುಮೆಣಸು, ಲವಂಗ, ದಾಲ್ಚಿನಿ, ಏಲಕ್ಕಿ.ನಾಟಿ ಶುಂಠಿ, ಅರಿಶಿನದಂಥ ಸಂಬಾರ ಬೆಳೆಗಳು. ಲೆಕ್ಕಕ್ಕೆ ಸಿಗದ ಹಣ್ಣಿನ ಮರಗಳು, ಹೆಸರೇ ಗೊತ್ತಿಲ್ಲದ ಔಷಧ ಸಸ್ಯಗಳು. ಹನ್ನೆರಡು ವರ್ಷಗಳಿಂದ ರಾಸಾಯನಿಕ ಕೃಷಿ ಅನುಸರಣೆ. ಕಳೆದ ಮೂರು ವರ್ಷಗಳಿಂದ ಹಂತ ಹಂತವಾಗಿ ತೋಟವನ್ನು ಸಾವಯವ ಕೃಷಿಗೆ ಅಳವಡಿಸುತ್ತಿದ್ದಾರೆ.

**ಸಾವಯವ ಗೊಬ್ಬರವೇ ತೋಟದ ಶಕ್ತಿ :**

2007ರಲ್ಲಿ ಭೂಮಿ ಸುಸ್ಥಿರ ಅಭಿವೃದ್ಧಿ ಸಂಸ್ಥೆ ಫಲ್ಗುಣಿ ಗ್ರಾಮವನ್ನು ಸಾವಯವ ಗ್ರಾಮ ಯೋಜನೆಗೆ ಆಯ್ಕೆ ಮಾಡಿತು. ಗೋಪಾಲ್ ಈ ಯೋಜನೆಯ ಫಲಾನುಭವಿಯಾದರು. ಹಸಿರೆಲೆಗೊಬ್ಬರ ತಯಾರಿಕೆ, ಬಳಕೆ, ಜೀವಾಮೃತದಂಥ ಸಸ್ಯಜನ್ಯ ಕೀಟನಾಶದ ಬಳಕೆ, ಅಜೋಸ್ಪಿರಿಲಂ, ಟ್ರೈಕೋಡರ್ಮಾದಂಥ ಜೈವಿಕ ಗೊಬ್ಬರಗಳ ಬಳಕೆ ಕುರಿತು ತರಬೇತಿ ಪಡೆದರು. ಪ್ರಗತಿಪರ ಕೃಷಿಕರ ತೋಟಗಳ

ಪ್ರವಾಸ ಮಾಡಿದರು. ತರಬೇತಿ ಮತ್ತು ಪ್ರವಾಸ ಗೋಪಾಲ್‌ಗೆ ಹೊಸ ದಿಕ್ಕು ಪರಿಚಯಿಸಿತು. ನಂತರದಲ್ಲೇ ತಮ್ಮ ಜಮೀನನ್ನು ಹಂತ ಹಂತವಾಗಿ ಸಾವಯವ ಕೃಷಿಗೆ ಪರಿವರ್ತಿಸಲು ಸಂಕಲ್ಪ ಮಾಡಿದರು.

ಆರಂಭದಲ್ಲಿ ಸಾವಯವ ಕೃಷಿಗೆ ಬೇಕಾದ ಹಸಿರೆಲೆ ಗೊಬ್ಬರ, ಎರೆಗೊಬ್ಬರ, ಚಿಗುರುವ ಕಡ್ಡಿಯ ಕಾಂಪೋಸ್ಟ್ ಗೊಬ್ಬರದ ಘಟಕಗಳು ಸಿದ್ಧವಾದವು. ತೋಟದ ತರಗೆಲೆ, ಆಕಳಿನ ಸಗಣಿ, ಇತರೆ ಜೈವಿಕ ತ್ಯಾಜ್ಯಗಳೇ ಗೊಬ್ಬರಕ್ಕೆ ಒಳಸುರಿಗಳಾಯ್ತು. ನಯಾಪೈಸೆ ಖರ್ಚಿಲ್ಲದೇ ಮೂರು ಮೂರು ತಿಂಗಳಿಗೆ ಎರಡು-ಮೂರು ಟ್ರಾಕ್ಟರ್ ಗೊಬ್ಬರ ಲಭ್ಯವಾಯಿತು. ಮೊದಲ ವರ್ಷದಲ್ಲೇ ಒಂದು ಎಕರೆ ಕಾಫಿ, ಒಂದು ಎಕರೆ ಗದ್ದೆ, ಒಂದೂವರೆ ಎಕರೆ ಕಾಳು ಮೆಣಸನ್ನು ಸಾವಯವ ಕೃಷಿ ಪದ್ಧತಿಗೆ ಅಳವಡಿಸಿದರು. ಒಂದೂವರೆ ಟನ್ ಸಾವಯವ ಕಾಫಿ (ರೋಬಾಸ್ಟಾ) ಉತ್ಪಾದನೆ ಯಾಯಿತು. 200 ಕೆ.ಜಿ ಅರೇಬಿಕಾ, ಒಂದೂವರೆ ಎಕರೆಯಲ್ಲಿ 600 ಕೆ.ಜಿ ಮೆಣಸು ಇಳುವರಿ ಪಡೆದಿದ್ದಾರೆ.

ಮೊದಲ ವರ್ಷದ ಗೆಲುವು ಎರಡನೇ ವರ್ಷದಿಂದ ಸಾವಯವ ಕೃಷಿ ವಿಸ್ತರಣೆಗೆ ದಾರಿ ತೋರಿತು. ಪರಿಣಾಮ ಉಳಿದ ಬೆಳೆಗಳಿಗೂ ರಸಗೊಬ್ಬರದ ಜೊತೆ ಸಾವಯವ ಗೊಬ್ಬರ ಮಿಶ್ರ ಮಾಡಿ ಕೊಟ್ಟರು. ನಿರೀಕ್ಷೆಗೂ ಮೀರಿದ ಫಲಿತಾಂಶ ಬಂತು. ಗೋಪಾಲ್ ಖುಷಿಯಾದರು ಭವಿಷ್ಯದಲ್ಲಿ ರಸಗೊಬ್ಬರಕ್ಕೆ ಫುಲ್‌ಸ್ಟಾಪ್ ಹಾಕಲು ನಿರ್ಧರಿಸಿದರು.

**ಮೂರು ವರ್ಷಗಳ ನಂತರ :**

ಸಾವಯವ ಕೃಷಿ ಪದ್ಧತಿ ಅನುಷ್ಠಾನಗೊಂಡು ಮೂರು ವರ್ಷಗಳು ಕಳೆದಿವೆ. ಈಗ ಗೋಪಾಲ್ ಅವರು ವರ್ಷದಲ್ಲಿ ಸರಾಸರಿ ಎರಡೂವರೆ ಟನ್ ಹಸಿರೆಲೆಗೊಬ್ಬರ, 2000 ಲೀಟರ್ ಜೀವಾಮೃತ ಉತ್ಪಾದಿಸುತ್ತಿದ್ದಾರೆ. (ಎರಡೂವರೆ ವರ್ಷದಿಂದ 5 ಟನ್ ಗೊಬ್ಬರ ತಯಾರಿಸಿದ್ದಾರೆ). ಮೊದಲು ವಾರ್ಷಿಕ ಸರಾಸರಿ 80 ಚೀಲ (50 ಕೆ.ಜಿ ಪ್ರಮಾಣ) ರಸಗೊಬ್ಬರ, ಇದಕ್ಕೆ ಮಿಶ್ರ ಮಾಡಲು 2 ಟನ್ ಸಾವಯವ ಗೊಬ್ಬರ ಖರೀದಿಸುತ್ತಿದ್ದರು. ಸಾವಯವ ಗೊಬ್ಬರ ಉತ್ಪಾದನೆಯ ನಂತರ ರಸಗೊಬ್ಬರ ಪ್ರಮಾಣ 55 ಚೀಲಕ್ಕೆ ಇಳಿದಿದೆ. ಸಾವಯವ ಗೊಬ್ಬರ ಕೊಳ್ಳುವುದಿಲ್ಲ. ಶೇ.60ರಷ್ಟು ಹಣ ಉಳಿತಾಯವಾಗಿದೆ.

ಗೊಬ್ಬರದ ಜೊತಗೆ ಹೆಚ್ಚುವರಿ ಪೋಷಕಾಂಶವಾಗಿ ಬೇವಿನ ಹಿಂಡಿ, ವಿಎಎಂ, ಅಜೋಲಾ, ಸುಣ್ಣ, ಸಾವಯವ ಯೂರಿಯಾ.. ಹೀಗೆ ಮಣ್ಣಿನ ಸಾವಯವ ಶಕ್ತಿ ಹೆಚ್ಚಿಸಲು ಸಾಧ್ಯತೆ ಇರುವ ಎಲ್ಲ ಜೈವಿಕ ಪೋಷಕಾಂಶಗಳನ್ನು ನೀಡಿದ್ದಾರೆ.

ಮುಂಗಾರಿಗೆ ಮುನ್ನ ಹಾಗೂ ಮೆಣಸಿನ ಬೆಳೆ ಕಟಾವು ಮಾಡಿದ ನಂತರ ಪ್ರತಿ ಕಾಳು ಮೆಣಸಿನ ಬಳ್ಳಿಗೆ ಸಾವಯವ ಗೊಬ್ಬರ ಕೊಡುತ್ತೇವೆ. ಅದೇ ಸಮಯದಲ್ಲಿ **ಎರಡು ಲೀಟರ್** ಜೀವಾಮೃತ ನೀಡುತ್ತೇವೆ. ಇದರಿಂದ ಬಳ್ಳಿಗಳ ಬೆಳವಣಿಗೆ ಉತ್ತಮವಾಗಿದ್ದು, ಸೊರಗು ರೋಗ ಕಡಿಮೆಯಾಗಿದೆ ಎನ್ನುತ್ತಾರೆ ಗೋಪಾಲ್.

ಗೋಪಾಲ್ ಅವರು ಆರಂಭದಲ್ಲಿ ಕೇವಲ ಸಾವಯವ ಗೊಬ್ಬರ ಕೊಡುತ್ತಿದ್ದರು. ಗೊಬ್ಬರದ ಜೊತೆ ಟ್ರೈಕೋಡರ್ಮಾ, ಜೀವಾಮೃತ ಕೊಡುವುದಕ್ಕೆ ಸಲಹೆ ನೀಡಿದೆವು. ಅವೆಲ್ಲ ಕೊಟ್ಟ ನಂತರ ತೋಟದ ಮಣ್ಣಿನಲ್ಲಿ ಸಾವಯವ ಅಂಶ ವೃದ್ಧಿಯಾಗಿದೆ. ಮಣ್ಣು ಹುಳಿ ಅಂಶ ಕಳೆದುಕೊಂಡು ಪೋಷಕಾಂಶ ಭರಿತವಾಗಿದೆ ಎನ್ನುತ್ತಾರೆ ಭೂಮಿ ಸುಸ್ಥಿರ ಅಭಿವೃದ್ಧಿ ಸಂಸ್ಥೆಯ ಯೋಜನಾ ನಿರ್ದೇಶಕ ಕೆ.ರವಿ.

**ಜೀವ ವೈವಿಧ್ಯ ತೋಟ**:

ಗೋಪಾಲ್ ಜೊತೆಯಲ್ಲಿ ತೋಟ ಸುತ್ತು ಹಾಕಲು ಹೊರಟರೆ 50ಕ್ಕೂ ಹೆಚ್ಚು ಕಾಡುಗಿಡಗಳನ್ನು ಪರಿಚಯಿಸುತ್ತಾರೆ. ಇಪ್ಪತ್ತೈದರಿಂದ ಮೂವತ್ತು ವಿಧದ ಹಣ್ಣಿನ ಗಿಡಗಳನ್ನು ತೋರಿಸುತ್ತಾರೆ. ಇವೆಲ್ಲ ಕಾಫಿ ಜೊತೆಗೆ ಹೆಚ್ಚುವರಿ ಆದಾಯ ನೀಡುವ ಬೆಳೆಗಳು. ಅಷ್ಟೇ ಅಲ್ಲ. ಈ ವೈವಿಧ್ಯವಿರುವುದರಿಂದಲೇ ನಮ್ಮ ತೋಟಕ್ಕೆ ಕೀಟ ಬಾಧೆ ಕಡಿಮೆ ಎನ್ನುತ್ತಾರೆ ಗೋಪಾಲ್.

ಸಾವಯವ ಕೃಷಿ ಮತ್ತು ಸಮಗ್ರ ಕೃಷಿ ಪದ್ಧತಿ ಬಗ್ಗೆ ತಿಳಿದ ಮೇಲೆಯೇ ನಮ್ಮ ತೋಟದ ಮರಗಳನ್ನು ಗುರುತಿಸಲು ಆರಂಭಿಸಿದೆ. ಅಲ್ಲಿಯವರೆವಿಗೂ ಕೃಷಿ ಮತ್ತು ಮರಗಳ ನಡುವಿನ ಸಂಬಂಧ ಅಷ್ಟಾಗಿ ತಿಳಿದಿರಲಿಲ್ಲ ಎನ್ನುವ ಗೋಪಾಲ್, ಹವ್ಯಾಸದ ನೆಪದಲ್ಲಿ ಶಿರಾ ಬಿದಿರು, ಬಣ್ಣದ ಬಿದಿರು, ಬರ್ಮಾ ಬಿದಿರು, ಎಚ್- ಬಿದಿರು, ಕರಿ ಬಿದಿರಿನಂತಹ ಐದು ತರಹದ ಬಿದಿರಿನ ತಳಿಗಳನ್ನು ಬೆಳೆಸಿದ್ದಾರೆ.

**ಸಮೃದ್ಧ ಕೈತೋಟ, ಪೌಷ್ಟಿಕ ತರಕಾರಿ:**

ತೋಟದ ನಡುವೆಯೇ ವಾಸವಿರುವ ಗೋಪಾಲ್ ಪುಟ್ಟ ಜಾಗದಲ್ಲಿ ಕೈತೋಟ ಮಾಡಿಕೊಂಡಿದ್ದಾರೆ. ಪತ್ನಿ ಶೀಲ, ಪುತ್ರ ಸಚಿನ್ ಈ ತೋಟದ ಉಸ್ತುವಾರಿ ನೋಡಿಕೊಳ್ಳುತ್ತಾರೆ.

ಮೂರು ವರ್ಷದ ಹಿಂದೆ ವಾರಕ್ಕೆ ಕನಿಷ್ಠ 200 ರೂಪಾಯಿ ತರಕಾರಿ ಕೊಳ್ಳುತ್ತಿದ್ದರು. ಸಾವಯವ ಗ್ರಾಮ ಯೋಜನೆ ಅನುಷ್ಠಾನಗೊಂಡ ಮೇಲೆ ಗೋಪಾಲ್ ಮನೆಯಲ್ಲಿ ಸಮೃದ್ಧ ಕೈತೋಟ ರೂಪುಗೊಂಡಿದೆ. ಕಂಪೌಂಡ್ ಪಕ್ಕದಲ್ಲಿ ಹತ್ತು ಅಡಿ ಉದ್ದ ಎರಡು ಅಡಿ ವಿಸ್ತೀರ್ಣದಲ್ಲಿ ಅಲಸಂದೆ, ಬದನೆ, ಹಸಿಮೆಣಸು, ಬೀನ್ಸ್... ಹೀಗೆ ಹದಿಮೂರು ವಿಧದ ತರಕಾರಿ ಬೆಳೆಯುತ್ತಿದ್ದಾರೆ. ಅಜೋಲಾ ಘಟಕಕ್ಕೆ ನೆರಳು ಮಾಡಿರುವ ಚಪ್ಪರದಲ್ಲಿ ಬಸಳೆ, ಚಪ್ಪರದ ಅವರೆಯಿದೆ. ಈ ಭಾಗದ ವಿಶೇಷ ಬದನೆ ತಳಿ ಮೊಳ ಬದನೆಯಿದೆ.

ತರಕಾರಿ ಬೆಳೆಗೆ ಎರೆಗೊಬ್ಬರ, ಹಸಿರೆಲೆ ಗೊಬ್ಬರ ಕೊಡುವುದರಿಂದ ರುಚಿ ಹೆಚ್ಚು. ಪೌಷ್ಠಿಕಾಂಶಯುಕ್ತವಾಗಿರುತ್ತವೆ. ಗಿಡಗಳ ಆರೋಗ್ಯ ವೃದ್ಧಿಗಾಗಿ ಜೀವಾಮೃತ ಕೊಡುತ್ತೇವೆ. ಮಣ್ಣು, ಗಿಡ ಎರಡೂ ಆರೋಗ್ಯಪೂರ್ಣವಾಗಿರುವುದರಿಂದ ಸಮೃದ್ಧ ತರಕಾರಿ ಲಭ್ಯವಾಗುತ್ತಿವೆ. ಪೇಟೆ ತರಕಾರಿ ತಿನ್ನುತ್ತಿದ್ದಾಗ ಗ್ಯಾಸ್ಟ್ರಿಕ್‌ನಂಥ ರೋಗಗಳು ಬಾಧಿಸುತ್ತಿತ್ತು. ಈಗ ಅಂಥ ತೊಂದರೆಗಳಾವುವೂ ಕಾಣಿಸಿಕೊಂಡಿಲ್ಲ ಎನ್ನುತ್ತಾರೆ ಕೈ ತೋಟದ ಉಸ್ತುವಾರಿ ನೋಡಿಕೊಳ್ಳುವ ಗೋಪಾಲ್ ಪತ್ನಿ ಶೀಲಾ.

ಅಪ್ಪಟ ಸಾವಯವ ಕೃಷಿಯಲ್ಲೇ ಕೈತೋಟ ಬೆಳೆಸಿರುವ ಗೋಪಾಲ್ ಅವರಿಗೆ ತರಕಾರಿ ಕೃಷಿಗಾಗಿ ನಯಾಪೈಸೆ ಖರ್ಚು ಮಾಡಿಲ್ಲ. ಬದಲಾಗಿ ತಮ್ಮಲ್ಲಿ ದೊರೆಯುವ ತರಕಾರಿ ಬೀಜಗಳನ್ನು ಮಾರಾಟ ಮಾಡಿ ಸಲ್ಪ ಹಣ ಸಂಪಾದಿಸಿದ್ದಾರೆ. ಮಂಗಳೂರು ಸೌತೆಯಂಥ ದಂಡಿಯಾಗಿ ಬೆಳೆಯುವ ತರಕಾರಿಗಳನ್ನು ನೆಂಟರಿಷ್ಟರಿಗೆ, ಅಕ್ಕಪಕ್ಕದವರಿಗೆ ಉಚಿತವಾಗಿ ಹಂಚಿ ಖುಷಿಪಟ್ಟಿದ್ದಾರೆ. ಕೈತೊಟ ಮಾಡಿಕೊಂಡ ಮೇಲೆ ಪೇಟೆ ಕಡೆ ತರಕಾರಿ ಕೊಳ್ಳಲು ತಲೆ ಹಾಕಿಲ್ಲ. ಕಳೆದ ಎರಡು ವರ್ಷಗಳಿಂದ ನಮ್ ತರಕಾರಿ ಬಿಲ್ ಶೂನ್ಯ ಎಂದು ಹೇಳುವಾಗ ಗೋಪಾಲ್ ಮುಖದಲ್ಲಿ ಹೆಮ್ಮೆಯ ಕಳೆ ಮೂಡುತ್ತವೆ.

**ಸಮಾಧಾನದ ಆದಾಯ:**

ಸಾವಯವ ಕೃಷಿ ಉತ್ಪಾದನೆ ಬಗ್ಗೆ ಗೋಪಾಲ್ ಅವರೆಂದೂ ಉತ್ಪ್ರೇಕ್ಷೆಯಿಂದ ಮಾತನಾಡುವುದಿಲ್ಲ. ಅಂಥದ್ದೇನು ಬದಲಾವಣೆ ಕಂಡಿಲ್ಲ. ಆದರೆ ದುಬಾರಿ ಒಳಸುರಿಗೆ ಕಡಿವಾಣ ಬಿದ್ದಿದೆ ಎಂದು ಹೇಳುವುದನ್ನು ಮರೆಯುವುದಿಲ್ಲ. ಏಕೆಂದರೆ ಸಾವಯವ ಕೃಷಿ ಪರಿವರ್ತನಾ ಅವಧಿಯಲ್ಲಿ ಒಂದೂವರೆ ಎಕರೆಯಿಂದ ಒಂದೂವರೆ ಟನ್ ಸಾವಯವ ಕಾಫಿ (ರೋಬಾಸ್ಟಾ ತಳಿ) ಉತ್ಪಾದಿಸಿದ್ದಾರೆ. 200 ಕೆ.ಜಿ ಅರೇಬಿಕಾ, ಒಂದೂವರೆ ಎಕರೆಯಲ್ಲಿ 600 ಕೆ.ಜಿ ಮೆಣಸು ಇಳುವರಿ ಪಡೆದಿದ್ದಾರೆ. ಇದಕ್ಕಿಂತ ಸಾಧನೆ ಇನ್ನೇನು ಬೇಕು ಹೇಳಿ.

ಸಾವಯವ ಕೃಷಿಯಲ್ಲಿ ಆರಂಭದಲ್ಲಿ ಕೆಲಸ ಹೆಚ್ಚು. ಇಳುವರಿ ಕಡಿಮೆ. ಪರಿವರ್ತನಾ ಸಮಯದಲ್ಲಿ ಸ್ವಲ್ಪ ಶ್ರಮ ಎನಿಸುತ್ತದೆ. ಒಂದು ಸಾರಿ ಭೂಮಿ ಹದಗೊಂಡು, ಸಾವಯವಕ್ಕೆ ಒಗ್ಗಿಕೊಂಡರೆ ಕೆಲಸ ಕಡಿಮೆಯಾಗುತ್ತದೆ. ಇಳುವರಿ ಹೆಚುತ್ತದೆ. ಇಷ್ಟೆಲ್ಲಾ ಅರಿವಾಗಲು ನನಗೆ ಮೂರು ವರ್ಷಗಳು ಬೇಕಾಯಿತು- ಇದು ಗೋಪಾಲ್ ಅವರ ಪ್ರಾಮಾಣಿಕ ಅಭಿಪ್ರಾಯ.

ಹೆಚ್ಚು ಇಳುವರಿಗೆ ರಾಸಾಯನಿಕ ಗೊಬ್ಬರಗಳು ಅನಿವಾರ್ಯ ಎನ್ನುವ ಮಾತು ಸುಳ್ಳು. ಮಣ್ಣು- ನೀರು ಸಮರ್ಪಕವಾಗಿದ್ದರೆ ಉತ್ತಮ ಇಳುವರಿ ಸಾಧ್ಯ. ಹಾಗೆಯೇ ತೋಟದಲ್ಲಿ ಮಿಶ್ರಬೆಳೆ ಇದ್ದರೆ ಕೀಟ- ರೋಗ ಬಾಧೆ ಕಡಿಮೆಯಾಗುತ್ತದೆ. ಅದಕ್ಕೆ ನನ್ನ ತೋಟವೇ ಸಾಕ್ಷಿ ಎನ್ನುತ್ತಾರೆ ಅವರು.

ಗೋಪಾಲ್ ತೋಟ ಈಗ ಸಮೃದ್ಧವಾಗಿದೆ. ತೋಟ ನೋಡಲು ರೈತರು ಪ್ರವಾಸ ಬರುತ್ತಿದ್ದಾರೆ. ಕೃಷಿ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆಯುತ್ತಾರೆ. ಚರ್ಚೆ ಮಾಡುತ್ತಾರೆ. ಮೊದಲು ಸರ್ಕಾರಿ ಇಲಾಖೆಗಳು ಫಲ್ಗುಣಿಯಿಂದ ದೂರ ಉಳಿದಿದ್ದವು. ಕಳೆದ ಮೂರು ವರ್ಷದ ಪ್ರಗತಿ, ನಮ್ಮೂರಿನ ಬೆಳವಣಿಗೆ ಹಲವು ಇಲಾಖೆಗಳ ಕಣ್ಣು ತೆರೆಸಿದೆ. ಇಲಾಖೆಯವರು ನಮ್ಮನ್ನು ಹುಡುಕಿ ಬರುತ್ತಾರೆ. ಹಲವು ತರಬೇತಿಗಳಿಗಾಗಿ ಆಹ್ವಾನಿಸಿದ್ದಾರೆ. ನಾನು ನನ್ನ ಮಗ ತರಬೇತಿ ಪಡೆದಿದ್ದೇವೆ ಎಂದು ಹೇಳುತ್ತಾ ಜಗತ್ತನ್ನೇ ಗೆದ್ದಷ್ಟು ಖುಷಿ ಪಡುತ್ತಾರೆ ಗೋಪಾಲ್.

**ಕಾಡು ಮರಗಳ ವೈವಿಧ್ಯ**

ಹೊನ್ನೆ, ಅತ್ತಿ, ನೆಲ್ಲಿ, ಮಾಕಳಿ, ಗಂಡುಗುಳಿ, ಹೆಣ್ಣು ಚೊಟ್ಟೆ, ಗೋಣಿಮರ, ಗಂಗೆ ಮರ, ಮದ್ರಾಸ್ ಮರ, ಮೇ ಫ್ಲವರ್, ಏವಿನ ಮರ, ಹುಲ್ಲಂತಿ ಮರ, ನಂದಿ, ಬೀಟೆ, ಸಾಗುವಾಣಿ, ನೇರಳೆ, ಸಿಲ್ವರ್ ಓಕ್, ಹುಣಸೆ, ಹಿಪ್ಪೆ, ಮಹಾಗನಿ, ಅಕೇಶಿಯಾ, ಹೆಬ್ಬಲಸು, ಹಾಲುವಾಣ, ಗಂಧದ ಮರ, ಮ್ಯಾಂಜಿಯಂ, ಜುಮ್ಮನ ಮರ, ಮಡ್ಲೆ ಮರ, ಬೂರಗದ ಮರ, ಗುಗ್ಗಳ ಮರ, ಅಂಟುವಾಳ ಕಾಯಿ, ಕಕ್ಕೆ ಮರ, ಕಳ್ಳುವಾಣಿ ಮರ, ಕಹಿಕಲ್ ಮರ(ಅವಾಂತಿ ಮರ), ಚುಂಗಿನ ಮರ, ಕೋಳಿ ಜುಟ್ಟಿನ ಮರ, ಹೂವಿನ ಮರ.

**ಪುಟ್ಟ ಕೈತೋಟದಲ್ಲಿ ತರಕಾರಿ ಮೇಳ**

ಹುರುಳಿ ಕಾಯಿ, ನವಿಲು ಕೋಸು, ಬದನೆ - ಮೂರು ತಳಿ (ಮೊಳ ಬದನೆ ವಿಶೇಷ), ಮೂಲಂಗಿ, ಸೊಪ್ಪು (ನಾಲ್ಕು ತರಹದ್ದು) ಹಾಗಲ, ಸೌತೆ, ಮಂಗಳೂರು ಸೌತೆ, ತೊಂಡೆಕಾಯಿ, ಬಳ್ಳಿ ಬೀನ್ಸ್, ಬಸಳೆ, ಅಲಸಂದೆ, ದೊಡ್ಡ ಮೆಣಸಿನ ಕಾಯಿ. ಬಜ್ಜಿ ಮೆಣಸು, ಜಾಯಿಕಾಯಿ, ಟೊಮೆಟೊ, ಜವಳಿಕಾಯಿ., ಕಬ್ಬು, ಕೆಸುವಿನ ಗೆಡ್ಡೆ, ಗೆಣಸು, ಮರಗೆಣಸು.

**ದೇಸಿ ಮಳೆ ಮಾಪನ,**

**ಹತ್ತಾರು ವರ್ಷದ ದಾಖಲೆ**

ಕಾನೂನು ಪದವಿಧರ ಗೋಪಾಲ್ ಅವರಿಗೆ ಪ್ರತಿ ವರ್ಷ ಮಲೆನಾಡಿನಲ್ಲಿ ಸುರಿಯುವ ಮಳೆ ನೀರು ಪ್ರಮಾಣವನ್ನು ದಾಖಲಿಸುವ ಖಯಾಲಿ. ಇದಕ್ಕಾಗಿ ದೇಸಿ ಮಳೆ ಮಾಪನವನ್ನು ಸಿದ್ಧಮಾಡಿಕೊಂಡಿದ್ದಾರೆ. ಒಂದು ಬಿಸ್ಲೆರಿ ಶೀಶೆ, ಅದಕ್ಕೊಂದು ಆಲಿಕೆ(ಫೆನಲ್) ಜೋಡಿಸಿ ಮನೆ ಮುಂದಿನ ಕಣದ ಬದಿಯಲ್ಲಿಡುತ್ತಾರೆ. ಶೀಶೆಯಲ್ಲಿ ಸಂಗ್ರಹ ವಾಗುವ ನೀರನ್ನು ಅಳತೆ ಮಾಡಿ ಈ ವರ್ಷ ಇಷ್ಟೇ ಮಳೆ ಬಂದಿದೆ ಎಂದು ದಾಖಲಿಸುತ್ತಾರೆ. ಕೃಷಿ ಚಟುವಟಿಕೆಗಳಿಗೆ ಈ ಮಳೆ ಪ್ರಮಾಣ ಸಹಾಯವಾಗುತ್ತದೆ ಎನ್ನುವ ಗೋಪಾಲ್ ಅವರ ಕಿಸೆಯಲ್ಲಿ ಪುಟ್ಟದೊಂದು ನೋಟ್ ಪುಸ್ತಕವಿದೆ. ಆ ಪುಸ್ತಕದಲ್ಲಿ ಹತ್ತಾರು ವರ್ಷದ ಮಳೆ ಪ್ರಮಾಣವನ್ನು ದಾಖಲಿಸಿಟ್ಟಿದ್ದಾರೆ. ಪುಸ್ತಕ ತೆರೆದರೆ ಅತಿ ಹೆಚ್ಚು ಮಳೆ ಬಿದ್ದ ವರ್ಷ, ಕಡಿಮೆ ಮಳೆ ಬಿದ್ದ ವರ್ಷಗಳ ಮಾಹಿತಿ ದೊರೆಯುತ್ತದೆ!

**ಸಂಪಾದಕರು : ಗಾಣಧಾಳು ಶ್ರೀಕಂಠ**